ಉತ್ತರ ಕರ್ನಾಟಕದ

# ಜನಪದ ಕಲೆಗಳು

ಡಾ॥ ಚಕ್ಕೆರೆ ಶಿವಶಂಕರ್



ಜಾನಪದ ಪುಸ್ತಕ ಮಾಲೆ – ೭

# ಉತ್ತರ ಕರ್ನಾಟಕದ ಜನಪದ ಕಲೆಗಳು

ಡಾ॥ ಚಕ್ಕೆರೆ ಶಿವಶಂಕರ್

ಕರ್ನಾಟಕ ಜಾನಪದ ಪರಿಷತ್ತು
ನಂ. ೧, ಜಲದರ್ಶಿನಿ ಬಡಾವಣೆ
ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ
ನ್ಯೂ ಬಿ.ಇ.ಎಲ್. ರಸ್ತೆ, ಬೆಂಗಳೂರು–೫೬೦ ೦೫೪

**UTTARA KARNATAKA JANAPADA KALEGALU** - By **Dr. Chakkere Shivashankar,** Pulished by Karnataka Janapada Parishath No. 1, Jaladarshini Layout, Near M. S. Ramaiah Hospital Gate, New BEL Road, Bangalore-560 054, Phone : 080-23605033. Janapada Loka : 7201143 / 7271555.

ಹಕ್ಕುಗಳು : ಲೇಖಕರಿಗೆ ಸೇರಿವೆ

ಪ್ರಥಮ ಮುದ್ರಣ : ೨೦೦೮

ಪುಟಗಳು : ೩೨

ಬೆಲೆ : ರೂ. ೧೦ (ಹತ್ತು ರೂಪಾಯಿಗಳು)

**ಗ್ರಂಥ ಪ್ರಕಟಣಾ ಸಲಹಾ ಸಮಿತಿ**

| | |
|---|---|
| **ನಾಡೋಜ ಡಾ॥ ಜಿ. ನಾರಾಯಣ** | ಅಧ್ಯಕ್ಷರು |
| **ಶ್ರೀ ಟಿ. ತಿಮ್ಮೇಗೌಡ** | ಸದಸ್ಯರು |
| **ಶ್ರೀಮತಿ ಇಂದಿರಾ ಬಾಲಕೃಷ್ಣ** | ಸದಸ್ಯರು |
| **ಶ್ರೀ ಗೊ. ರು. ಚನ್ನಬಸಪ್ಪ** | ಸದಸ್ಯರು |
| **ನಾಡೋಜ ಡಾ॥ ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ॥ ಎಂ. ಎ. ಜಯಚಂದ್ರ** | ಸದಸ್ಯರು |
| **ಪ್ರೊ. ಡಿ. ಲಿಂಗಯ್ಯ** | ಸಂಪಾದಕರು |
| **ಡಾ. ಚಕ್ಕೆರೆ ಶಿವಶಂಕರ್** | ಕಾರ್ಯದರ್ಶಿ-ಸಂಚಾಲಕರು |

ಮುದ್ರಕರು :

**ಚಂದನ ಪ್ರಿಂಟರ್ಸ್**

ನಂ. ೫೭, ವಿನಾಯಕ ಕಾಂಪ್ಲೆಕ್ಸ್

೮೦ ಅಡಿ ರಸ್ತೆ, ೯ನೇ ಮೇನ್, ಶ್ರೀನಿವಾಸನಗರ

ಬ್ಯಾಂಕ್ ಕಾಲೋನಿ, ಬೆಂಗಳೂರು-೫೬೦ ೦೫೦

# ಅಧ್ಯಕ್ಷರ ಮಾತು

ಕರ್ನಾಟಕ ಜಾನಪದ ಪರಿಷತ್ತಿನ ಹಲವು ಯೋಜನೆಗಳಲ್ಲಿ ಜಾನಪದ ಪುಸ್ತಕ ಪ್ರಕಟಣೆ ಒಂದು. ಇದರಲ್ಲಿ ವಿದ್ವತ್ ಗ್ರಂಥಗಳ ಪ್ರಕಟಣೆಗಳೇ ಹೆಚ್ಚು. ಇವುಗಳ ಜೊತೆಗೆ ಜಾನಪದ ಜನಪ್ರಿಯ ಪುಸ್ತಕ ಮಾಲೆಯನ್ನು ಪ್ರಾರಂಭಿಸಿದೆ. ಜಾನಪದವನ್ನು ಜನಸಾಮಾನ್ಯರಿಗೆ ತಲುಪಿಸುವುದು ಇದರ ಮುಖ್ಯ ಉದ್ದೇಶ. ಇದರಲ್ಲಿ ಜಾನಪದಕ್ಕೆ ದುಡಿದಿರುವ, ದುಡಿಯುತ್ತಿರುವ ಕಲಾವಿದರು, ಕಲೆಗಳು, ಸಂಗ್ರಾಹಕರು, ವಿದ್ವಾಂಸರು, ಸ್ವಾರಸ್ಯಕರವಾದ ಉಪಯುಕ್ತವಾದ ಜನಪದ ಗೀತ ಸಾಹಿತ್ಯದ ಸೋದಾಹರಣ ವ್ಯಾಖ್ಯಾನ–ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ, ನಾಡಿನ ಪ್ರಸಿದ್ಧ ಸಾಹಿತಿ ಸಂಶೋಧಕರಿಂದ ಕಿರುಗ್ರಂಥಗಳನ್ನು ಬರೆಯಿಸಿ, ಪ್ರಕಟಿಸಿ, ಕೇವಲ ಹತ್ತು ರೂಪಾಯಿ ಬೆಲೆಗೆ ಒದಗಿಸಲು ಯೋಜಿಸಿದೆ. ಕಡಿಮೆ ಅವಧಿಯಲ್ಲಿ ಓದಿಕೊಳ್ಳಬಹುದಾದ ಈ ಗ್ರಂಥಗಳು ಹಲವು ಮಾಹಿತಿಗಳನ್ನು ಸಂಕ್ಷಿಪ್ತವಾಗಿ ತಿಳಿಯಪಡಿಸುತ್ತವೆ.

ಈ ಜನಪ್ರಿಯ ಪುಸ್ತಕ ಮಾಲೆಗೆ ಡಾ. ಚಕ್ಕೆರೆ ಶಿವಶಂಕರ್ ಅವರು **'ಉತ್ತರ ಕರ್ನಾಟಕದ ಜನಪದ ಕಲೆಗಳು'** ಎಂಬ ಕಿರುಹೊತ್ತಿಗೆಯನ್ನು ಬರೆದುಕೊಟ್ಟಿದ್ದಾರೆ. ಲೇಖಕರಿಗೂ ಗ್ರಂಥ ಪ್ರಕಟನಾ ಸಮಿತಿಯ ಸದಸ್ಯರಿಗೂ ಕೃತಜ್ಞತೆಗಳನ್ನು ಅರ್ಪಿಸಿ, ಸಹೃದಯರು ಈ ಪುಸ್ತಕವನ್ನು ಸ್ವಾಗತಿಸಬೇಕೆಂದು ಕೇಳಿಕೊಳ್ಳುತ್ತೇನೆ.

**ಜಿ. ನಾರಾಯಣ**

ಅಧ್ಯಕ್ಷರು

ಕರ್ನಾಟಕ ಜಾನಪದ ಪರಿಷತ್ತು

# ಲೇಖಕರ ಮಾತು

ಜನರಿಂದ, ಜನರಿಗಾಗಿ, ಜನರಿಗೋಸ್ಕರ ಹುಟ್ಟಿಕೊಂಡ ಜನಪದ ಕಲೆಗಳು ಜನಪದದ ಕಲಾತ್ಮಕ ಅಭಿವ್ಯಕ್ತಿ. ವರ್ಣರಂಜಿತ ವೇಷಭೂಷಣ, ಸುಮಧುರ ವಾದ್ಯಮೇಳ, ಸಂಭಾಷಣೆ, ಹಾಡುಗಾರಿಕೆ, ಕುಣಿತ, ಅಭಿನಯ ಮೊದಲಾದ ಅಂಶಗಳನ್ನು ತನ್ನಲ್ಲಿ ಅಂತರ್ಗತಿಸಿಕೊಂಡಿರುವ ಜನಪದ ಕಲೆಗಳು ಸಮುದಾಯದ ಬದುಕಿನ ಮೌಲ್ಯಗಳನ್ನು ಒಳಗೊಂಡಿರುವ ಸಂಸ್ಕೃತಿಯ ಕುರುಹುಗಳು ಎಂದರೆ ತಪ್ಪಲ್ಲ.

ಕರ್ನಾಟಕದಲ್ಲಿ ಸುಮಾರು ೨೦೦ಕ್ಕೂ ಹೆಚ್ಚು ಜನಪದ ಕಲೆಗಳು ಪ್ರಚಲಿತದಲ್ಲಿವೆ. ಇವುಗಳಲ್ಲಿ ಕೆಲವು ಪ್ರಕಾರಗಳಂತೂ ಸಾರ್ವತ್ರಿಕ ಜನಪ್ರಿಯತೆಯನ್ನು ಪಡೆದುಕೊಂಡಿವೆ. ಹಲವು ಪ್ರಕಾರಗಳು ಆಯಾ ಪ್ರದೇಶಕ್ಕೆ ಮಾತ್ರವೇ ಸೀಮಿತವಾಗಿ ಉಳಿದುಕೊಂಡು ಬಂದಿವೆ. ಇಂತಹ ಪ್ರಾದೇಶಿಕ ಜನಪದ ಕಲೆಗಳಲ್ಲಿ ಕೆಲವನ್ನು ಆಯ್ದು ಈ ಕಿರುಹೊತ್ತಿಗೆಯಲ್ಲಿ ಬಣ್ಣದ ಛಾಯಾಚಿತ್ರಗಳೊಂದಿಗೆ ಪರಿಚಯಿಸಲಾಗಿದೆ. ಆದ್ದರಿಂದ ಆಯಾ ಭಾಗದ ಕಲೆಗಳು ಎಂದಾಗ ಇದು ಸಮಗ್ರವಲ್ಲ. ಕೇವಲ ಪ್ರಾತಿನಿಧಿಕ ಕಲೆಗಳ ಪರಿಚಯವಷ್ಟೆ.

ಕರ್ನಾಟಕ ಜಾನಪದ ಪರಿಷತ್ತು ಜನಪ್ರಿಯ ಜಾನಪದ ಪುಸ್ತಕ ಮಾಲೆಯಲ್ಲಿ ಜಾನಪದದ ವಿವಿಧ ಸಂಗತಿಗಳನ್ನು ಕುರಿತು ಪರಿಚಯಿಸುವ ಸಲುವಾಗಿ ಕಿರುಹೊತ್ತಿಗೆಗಳನ್ನು ಪ್ರಕಟಿಸುತ್ತಿರುವುದು ಪ್ರಶಂಸಾರ್ಹ. ಇಂತಹ ಕಿರುಹೊತ್ತಿಗೆಗಳು ಮಕ್ಕಳಿಂದ ಮೊದಲುಗೊಂಡು ನವ ಸಾಕ್ಷರರವರೆಗೂ ಅರಿವು ಮೂಡಿಸುತ್ತವೆ ಎಂಬುದರಲ್ಲಿ ಸಂದೇಹವಿಲ್ಲ. ಈ ಕಿರುಹೊತ್ತಿಗೆಗಳ ಪ್ರಕಟಣೆಗೆ ಕಾರಣರಾದ ಕರ್ನಾಟಕ ಜಾನಪದ ಪರಿಷತ್ತಿನ ಎಲ್ಲಾ ಪದಾಧಿಕಾರಿಗಳು ಮತ್ತು ಗ್ರಂಥ ಪ್ರಕಟಣಾ ಸಮಿತಿ ಸದಸ್ಯರುಗಳಿಗೆ ಹೃತ್ಪೂರ್ವಕ ಧನ್ಯವಾದಗಳು.

**ಡಾ. ಚಕ್ಕೆರೆ ಶಿವಶಂಕರ್**

## ಅಲಾವಿ ಕುಣಿತ

ಕರ್ನಾಟಕದ ಉತ್ತರ ಭಾಗದಲ್ಲಿ ಮತ್ತು ಕರಾವಳಿ ಭಾಗದ ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಕುಣಿತವು ವಿಶೇಷವಾಗಿ ಕಂಡುಬರುತ್ತದೆ. ಮೊಹರಂ ತಿಂಗಳಿನ ಹತ್ತನೆಯ ದಿನದಂದು ಮುಸಲ್ಮಾನ ಬಾಂಧವರು, ಕರ್ಬಲ ಮೈದಾನದಲ್ಲಿ ನಡೆದ ಧರ್ಮಯುದ್ಧದಲ್ಲಿ ಆತ್ಮಾಹುತಿ ಮಾಡಿಕೊಂಡ ಇಮಾಂ ಹುಸೇನರ ನೆನಪಿಗಾಗಿ ಆಚರಿಸುವ ಆದರಣೆಯಿದು.



ಅಲಾವಿ ಎಂದರೆ ಬೆಂಕಿ ಕೆಂಡದಿಂದ ಸಿದ್ಧಪಡಿಸಿದ ಕೊಂಡ ಎಂದರ್ಥ. ಈ ಕೊಂಡವನ್ನು ಮುಸಲ್ಮಾನರು ತಮ್ಮ ದೇವರ ಹಸ್ತದ ಮುಂಭಾಗದಲ್ಲಿ ಸಿದ್ಧಪಡಿಸುತ್ತಾರೆ. ಈ ಅಗ್ನಿಕೊಂಡದ ಸುತ್ತಲೂ ಕರ್ಬಲ ಪದಗಳನ್ನು ಹಾಡುತ್ತಾ ಕುಣಿಯುತ್ತಾರೆ. ಅಲಾವಿ ಕುಣಿಯುವವರು ಕಾಲಿಗೆ ಗೆಜ್ಜೆ ಕಟ್ಟಿಕೊಂಡಿರುತ್ತಾರೆ. ಒಂದು ಕೈಯಲ್ಲಿ ದೊಣ್ಣೆ, ಮತ್ತೊಂದು ಕೈಯಲ್ಲಿ ಕರಸ್ತ್ರವನ್ನು ಹಿಡಿದು, ತಲೆಗೆ ಪೇಟ

ಸುತ್ತಿಕೊಂಡು ತಮಟೆ ವಾದ್ಯದ ಗತ್ತಿಗೆ ತಕ್ಕಂತೆ ವೈವಿಧ್ಯಮಯ ಭಂಗಿಗಳಲ್ಲಿ ಹೆಜ್ಜೆ ಹಾಕುತ್ತಾರೆ. ಅಲಾವಿ ಕುಣಿತದಲ್ಲಿ ಹಿಮ್ಮೇಳಕ್ಕೆ ಬಳಸುವ ತಮಟೆ ಅಥವಾ ತಪ್ಪಡೆಗೆ ಮುಸಲ್ಮಾನರಲ್ಲಿ 'ಡಾಯರಾ' ಎಂದು ಕರೆಯುತ್ತಾರೆ. ಈ ಡಾಯರಾವನ್ನು ಒಬ್ಬನು ಬಾರಿಸುತ್ತಿದ್ದು, ಉಳಿದವರು ಅಲಾವಿಗುಂಡಿಯ ಸುತ್ತ ಮೈದುಂಬಿದವರಂತೆ ಕುಣಿಯುತ್ತಾರೆ. ಕುಣಿಯುವಾಗ ಮಧ್ಯೆ ಮಧ್ಯೆ 'ಲಾಯ್ ತೋಯ್ ಧುಯ್' (ಯಾ ಇಮಾಮ್ ಧೀನ್) ಮತ್ತು 'ಯಾ ಹಸನ್, ಯಾ ಹುಸೇನ್' ಎಂದು ಕೂಗುತ್ತಿರುತ್ತಾರೆ. ಹಸನ್–ಹುಸೇನ್‌ರ ತ್ಯಾಗ, ವೀರ, ಆದರ್ಶಗಳನ್ನು ಒಳಗೊಂಡ ಕರ್ಬಲ ಹಾಡುಗಳು ಉತ್ತರ ಕರ್ನಾಟಕದ ಬೀದರ್, ಗುಲಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಕುಣಿತದಲ್ಲಿ ಹಿಂದೂಗಳು ಸಹ ಭಾಗವಹಿಸುತ್ತಾರೆ.

ಅಲಾವಿ ಕುಣಿತವು ಹಿಂದೂ ಮುಸಲ್ಮಾನರ ಸೌಹಾರ್ದಯುತ ಬಾಂಧವ್ಯಕ್ಕೆ ಉತ್ತಮ ನಿದರ್ಶನವಾಗಿದೆ. ದಕ್ಷಿಣ ಕರ್ನಾಟಕದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಬಾಬಯ್ಯನ ಹಬ್ಬದ ಸಂದರ್ಭದಲ್ಲಿ ಅಲಾವಿ ಕುಣಿತವನ್ನು ಪ್ರದರ್ಶಿಸುತ್ತಾರೆ. ಇಲ್ಲಿನ ವಿಶೇಷವೆಂದರೆ ಬಾಬಯ್ಯನ ಹಬ್ಬಕ್ಕೆ ತಿಂಗಳು ಮೊದಲೇ, ಸೊಂಟಕ್ಕೆ ಕೆಂಪುದಾರ ಕಟ್ಟಿದ, ಮುಖಕ್ಕೆ ಬಿಳಿ ಮತ್ತು ಕಪ್ಪು ಚುಕ್ಕೆಗಳನ್ನು ಧರಿಸಿ, ಕಾಲಿಗೆ ಗೆಜ್ಜೆ ಕಟ್ಟಿದ ಲಾಡಿಸಾಬ್ ವೇಷಧಾರಿಯು ಕೈಯಲ್ಲಿ ದೊಣ್ಣೆ ಹಿಡಿದು ಮನೆ ಮನೆಗೂ ಹೋಗಿ ಅದನ್ನು ನೆಲಕ್ಕೆ ಕುಟ್ಟಿ ಇಮಾಮರ ಸಂದೇಶವನ್ನು ಸಾರಿ ಮನೆಯವರಿಂದ ದವಸಧಾನ್ಯವನ್ನು ಸಂಗ್ರಹಿಸುತ್ತಾನೆ.

# ಕರಡೆ ಮಜಲು

ಕರ್ನಾಟಕದ ಉತ್ತರ ಭಾಗದಲ್ಲಿರುವ ಬಹುತೇಕ ಜಿಲ್ಲೆಗಳಲ್ಲಿ ಅಂದರೆ, ರಾಯಚೂರು, ಬಳ್ಳಾರಿ, ಬಿಜಾಪುರ, ಬೆಳಗಾಂ, ಬೀದರ್, ಗುಲಬರ್ಗಾ ಮುಂತಾದ ಕಡೆಗಳಲ್ಲಿ ವ್ಯಾಪಕವಾಗಿ ಕಂಡುಬರುವ ಕರಡೆ ಮಜಲು ಶುದ್ಧ ವಾದ್ಯಮೇಳ, ಪ್ರಮುಖ ವಾದ್ಯವಿಶೇಷವಾದ ಕರಡೆಯೊಂದಿಗೆ ಸಮಾಳ, ಚೌಗಡ, ತಾಳ, ದಿಮ್ಮು, ಸನಾದಿ ಮುಂತಾದವು. ಪೂರಕ ವಾದ್ಯಗಳು ಇವೆಲ್ಲವೂ ಸೇರಿ ಕರಡೆ ಮೇಳ ಅಥವಾ ಕರಡೆ ಮಜಲು ಎಂಬ ಹೆಸರು ಬಂದಿದೆ.



ಕರಡೆ ಮಜಲಿನಲ್ಲಿ ಸಾಮಾನ್ಯವಾಗಿ ೮ ರಿಂದ ೧೬ ಮಂದಿಯವರೆಗೂ ಕಲಾವಿದರು ಗುಂಪುಗೂಡುತ್ತಾರೆ. ಎಲ್ಲರೂ ಕಸೆ ಪಂಚೆ, ಕಸೆ ಅಂಗಿ, ತಲೆಗೆ ಹಳದಿ ಅಥವಾ ಕಿರುಮಂಜಿ ಬಣ್ಣದ ರುಮಾಲು, ಸೊಂಟಕ್ಕೆ ಕೆಂಪುಬಣ್ಣದ ವಸ್ತ್ರ ಬಿಗಿದು ಕೊರಳನ್ನು

ಸುತ್ತುವರಿದು ಎದೆಯ ಮೇಲೆ ಇಳಿಬಿಟ್ಟ ಶಲ್ಲೆ ಧರಿಸಿರುತ್ತಾರೆ. ಕೈಯಲ್ಲಿ ಗುಣಿ ಹಿಡಿದ ಕಲಾವಿದರು ವೃತ್ತಾಕಾರವಾಗಿ ನಿಲ್ಲುತ್ತಾರೆ. ಕರಡೆಯನ್ನು ನುಡಿಸುವ ಕೋಲುಗಳಲ್ಲಿ ಎಡಗೈಯಲ್ಲಿ ಹಿಡಿಯುವ ಕೋಲು ಒಂದು ಗೇಣು ಉದ್ದವಿದ್ದು ಕಿರುಬೆರಳಿನಷ್ಟು ದಪ್ಪವಿದ್ದರೆ, ಬಲಗೈಯಲ್ಲಿ ಹಿಡಿಯುವ ಕೋಲು ಕಿರುಬೆರಳ ಗಾತ್ರಕ್ಕಿಂತ ದಪ್ಪವಿರುತ್ತದೆ.

ಕರಡೆ ಮಜಲಿನ ಕುಣಿತದಲ್ಲಿ ಮೂರು ಬಗೆಯ ಹೆಜ್ಜೆಗಾರಿಕೆಗಳನ್ನು ಗುರುತಿಸಬಹುದು. ೧) ಎದುರು ಬದುರು ೨) ವೃತ್ತಾಕಾರ ೩) ಅರ್ಧ ಚಂದ್ರಾಕೃತಿ. ಪಲ್ಲಕ್ಕಿ, ಉತ್ಸವ, ಜಾತ್ರೆ, ಮದುವೆ ಮೊದಲಾದ ಸಂದರ್ಭಗಳಲ್ಲಿ ಎದುರು ಬದುರು ಅಭಿಮುಖವಾಗಿ ನಿಂತು ಹೆಜ್ಜೆ ಹಾಕುತ್ತಾ ನುಡಿಸುತ್ತಾರೆ. ವೀರಗಾಸೆ ಸಂದರ್ಭದಲ್ಲಿ ವೀರಗಾಸೆ ಕಲಾವಿದರನ್ನು ಸುತ್ತುವರಿದು ನಿಲ್ಲುತ್ತಾರೆ. ರಂಗಪ್ರದರ್ಶನದಲ್ಲಿ ಅರ್ಧಚಂದ್ರಾಕೃತಿಯಲ್ಲಿ ನಿಂತು ನುಡಿಸುತ್ತಾರೆ.

ಕರಡೆ ಮಜಲಿನಲ್ಲಿ ವಾದನದ ವಿವಿಧ ಹಂತಗಳಿಗೆ ಲಯದ ವೈವಿಧ್ಯವನ್ನು ಸೂಚಿಸುವ ಹಿರಿಯ ಪರಿಣತ ಕಲಾವಿದನೊಬ್ಬ ತಾಳ ಹಿಡಿದು ನಿಂತಿರುತ್ತಾನೆ. ಮಂದಗತಿಯ ಆದಿತಾಳದಲ್ಲಿ ಕರಡೆವಾದನ ಪ್ರಾರಂಭವಾಗುತ್ತದೆ. ಸನಾದಿಯವರು ಕರಡೆ ಮತ್ತು ಡೊಳ್ಳಿನವರನ್ನು ದ್ವಿಗುಣದಲ್ಲಿ ಬಾರಿಸುವಂತೆ ಪ್ರೇರೇಪಿಸಿದಾಗಲಂತೂ ವಾದ್ಯಗಾರರ ಉತ್ಸಾಹ, ಕುಣಿತ, ಕೇಕೆಗಳು ತಾರಕಕ್ಕೇರುತ್ತವೆ. ಜಂಪೆ ತಾಳ, ಆಟತಾಳ, ಚೌತಾಳಗಳು ಲಯದ ಕಾಲಸೂಚಿಯಾಗಿ ಮುಂದುವರಿದು ಕ್ರಮೇಣ ಧ್ರುತಗತಿಗೆ ಏರುತ್ತವೆ. ಒಬ್ಬೊಬ್ಬ ಕಲಾವಿದನು ಮುಂದೆ ಬಂದು ತನ್ನ ವಾದ್ಯ ನುಡಿಸುತ್ತಾ ಮಂಡಿಯೂರುವುದು, ಬಾಗಿ ನಿಲ್ಲುವುದು, ಲಘು ತಿರುವಿನಿಂದ ಹೊರಳಿ ನಿಲ್ಲುವುದು ಮಾಡುತ್ತಾನೆ. ಹೀಗೆ ಕರಡೆ ಮಜಲಿನಲ್ಲಿ ಕರಡೆಯವನು ವೀರಗಾಲು ಹೊಡೆದರೆ,

ಡೊಳ್ಳು-ತಾಳದವರು ಸಂದರ್ಭಕ್ಕೆ ತಕ್ಕಂತೆ ಗತ್ತು ಬಾರಿಸುತ್ತಾ ಕುಣಿದಾಡುವರು.

ಉತ್ತರ ಕರ್ನಾಟಕದಲ್ಲಿ ಮದುವೆ, ನಾಮಕರಣ, ತೇರು, ಜಾತ್ರೆ, ಉತ್ಸವ ಮೊದಲಾದ ಮಂಗಳ ಕಾರ್ಯಗಳಲ್ಲಿ, ವೀರಗಾಸೆ, ನಂದೀಧ್ವಜ ಕುಣಿತಗಳಲ್ಲಿ, ಸಾರ್ವಜನಿಕ ವೇದಿಕೆ ಪ್ರದರ್ಶನಗಳಲ್ಲಿ ಕರಡೆ ಮೇಳವು ಬಳಕೆಯಾಗುತ್ತಿದೆ. ಒಟ್ಟಿನಲ್ಲಿ ಕರಡೆಮಜಲು ಸಮೂಹ ವಾದ್ಯಗೋಷ್ಠಿ. ಹಲವು ಬಗೆಯ ವಾದ್ಯಗಳು, ಹಲವು ಗತಿ-ಗತ್ತು ಹಾಗೂ ಪದಗತಿಗಳಿಂದ ಲಘುವಾಗಿ ನುಡಿಸುವ ಪ್ರಮುಖ ಕಲಾವಿಶೇಷವಾಗಿದೆ. ಹಿಂದೆ ಕರಡೆ ಮೇಳವನ್ನು ಯುದ್ಧದ ಸಂದರ್ಭಗಳಲ್ಲಿ ಸೈನಿಕರನ್ನು ಹುರಿದುಂಬಿಸುವುದಕ್ಕೆ ಬಳಸುತ್ತಿದ್ದರೆಂದು ತಿಳಿದುಬರುತ್ತದೆ.

## ಕೊಡದ ಕುಣಿತ

ಬೆಳಗಾವಿ ಜಿಲ್ಲೆಯ ಮರಾಠಿ ಭಾಷಿಕರಲ್ಲಿ ರೂಢಿಯಲ್ಲಿರುವ ಕೊಡದ ಕುಣಿತವು ಮನರಂಜನಾ ಪ್ರಧಾನವಾದ ಕಲೆ. ಕೊಡ ಅಥವಾ ಬಿಂದಿಗೆಯನ್ನು ಕೈಗಳಲ್ಲಿ ಹಿಡಿದು ಬಾಯಿಯಿಂದ ಊದುತ್ತಾ ಕುಣಿಯುವುದರಿಂದ ಇದಕ್ಕೆ ಕೊಡದ ಕುಣಿತ ಎಂದು ಹೆಸರು ಬಂದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸಿದ್ಧಿ ಹೆಂಗಸರು ಮತ್ತು ಉತ್ತರ ಕನ್ನಡ ಜಿಲ್ಲೆಯ ಆಗೇರರು, ಕೊಮಾರಪಂತ, ಹರಕಂತ, ಹಾಲಕ್ಕಿ ಒಕ್ಕಲಿಗರ ಹೆಂಗಸರಲ್ಲಿ ಈ ಕುಣಿತ ರೂಢಿಯಲ್ಲಿದೆ. ಆದರೆ ಅಲ್ಲಿ ಕೊಡದ ಕುಣಿತ ಎನ್ನುವುದರ ಬದಲಾಗಿ ಮುಗಡಿ ಕುಣಿತ ಎಂದು ಕರೆಯುತ್ತಾರೆ.

ಕೊಡದ ಕುಣಿತದಲ್ಲಿ ಯುವಕರು ಹೆಚ್ಚಾಗಿ ಪಾಲ್ಗೊಳ್ಳುತ್ತಾರೆ. ಸಮಪ್ರಾಯ ಇರುವ ಇಪ್ಪತ್ತರಿಂದ ಮೂವತ್ತು ಮಂದಿ ಕಲಾವಿದರು

ಒಂದೇ ಬಣ್ಣದ ಬನಿಯನ್ ಮತ್ತು ಚಡ್ಡಿ, ತಲೆಗೊಂದು ಬಣ್ಣದ ವಸ್ತ್ರ, ಕಾಲಿಗೆ ಗೆಜ್ಜೆ ಧರಿಸಿ ಕೈಯಲ್ಲಿ ಬರಿದಾದ ತಾಮ್ರ ಇಲ್ಲವೆ ಹಿತ್ತಾಳೆಯ ಕೊಡ ಹಿಡಿದು, ಕೊಡವನ್ನು ಬಾಯಿಯ ಹತ್ತಿರ ಹಿಡಿದು ಭೊಂ ಭೊಂ ಎಂದು ಊದುತ್ತಾ ತಾಳಕ್ಕೆ ತಕ್ಕಂತೆ ಕುಣಿಯುತ್ತಾರೆ. ತಂಡದ ಮುಖ್ಯಸ್ಥನು ಮಧ್ಯೆ ನಿಂತು ಕೊಳಲೂದುತ್ತಾನೆ. ಕೊಳಲಿನ ನಾದದ ಗತ್ತು ಬದಲಾದಂತೆ ಕುಣಿತದ ಗತ್ತೂ ಬದಲಾಗುತ್ತದೆ.

ಕೊಡದ ಕುಣಿತದಲ್ಲಿ ಕೃಷ್ಣಲೀಲೆಗೆ ಸಂಬಂಧಿಸಿದ ಸನ್ನಿವೇಶಗಳ ಅಭಿನಯವಿದೆ. ಕೊಳಲೂದುತ್ತಿರುವ ಕೃಷ್ಣನ ಸುತ್ತ ಕೊಡ ಹೊತ್ತು ಗೋಪಿಕಾಸ್ತ್ರೀಯರು ಲಲ್ಲೆಗರೆಯುತ್ತಾ, ಮೋಹಿಸುತ್ತಾ ಮೋಹಕ ಲಾಲಿತ್ಯಪೂರ್ಣ ನರ್ತನ ನಡೆಸುವ ಕಲ್ಪನೆಯನ್ನು ತಂದು ಕೊಡುವುದುಂಟು. ಕಲಾವಿದರು ಮಂಡಲಾಕಾರದಲ್ಲಿ ನಿಂತು ಸುತ್ತುತ್ತಾ ಕುಣಿಯುವುದರ ಜೊತೆಗೆ ಎರಡು ಗುಂಪುಗಳಾಗಿ ಪರಸ್ಪರ ಅಭಿಮುಖವಾಗಿ ನಿಂತು ಕುಣಿಯುವುದು ಮತ್ತು ಕುಳಿತು ಕುಣಿಯುವುದು ಹಾಗೆ ಕುಣಿಯುವಾಗ ಎಡಗಾಲು ಹೆಜ್ಜೆಯನ್ನು ಊರಿ, ಬಲಗಾಲು ಹೆಜ್ಜೆಯನ್ನು ತುಸು ಮೇಲಕ್ಕೆತ್ತಿ ಬೆನ್ನನ್ನು ಬಾಗಿಸಿ ಬಿಂದಿಗೆಯನ್ನು ಊದುವುದು, ಆಮೇಲೆ ಬಲಗಾಲನ್ನೂರಿ ಎಡಗಾಲನ್ನು ಮೇಲಕ್ಕೆತ್ತಿ ಊದುವುದು ಇತ್ಯಾದಿ ವರಸೆಗಳನ್ನು ಪ್ರದರ್ಶಿಸುತ್ತಾರೆ. ಕೊಡ ಹಿಡಿದು ಜಡೆ ಹೆಣೆಯುವುದೂ ಉಂಟು. ಗೆಜ್ಜೆಯ ನಾದದ ಜೊತೆಗೆ ಕೊಡದಿಂದ ಹೊರಹೊಮ್ಮುವ ಉಸಿರಿನ ಸದ್ದಿನ ಲಯವೂ ಸೇರಿ ಕುಣಿತಕ್ಕೆ ಕಳೆ ತಂದುಕೊಡುತ್ತದೆ.

## ಜಗ್ಗಲಿಗೆ ಮೇಳ

ಜಗ್ಗಲಿಗೆ ಮೇಳವು ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ ಕಂಡುಬರುತ್ತದೆ. ಜಗ್ಗಲಿಗೆ ಎನ್ನುವಂಥದ್ದು ಸುಮಾರು ಐದು ಅಡಿ ಎತ್ತರದ ವೃತ್ತಾಕಾರದ ಚರ್ಮವಾದ್ಯ. ಎತ್ತಿನಗಾಡಿಯ ಚಕ್ರದ ಕಬ್ಬಿಣದ ದುಂಡಾದ ಪಟ್ಟಿಗೆ ಹದಗೊಳಿಸಿದ ಎತ್ತು, ಎಮ್ಮೆ, ಕೋಣಗಳ

ಚರ್ಮವನ್ನು ಚರ್ಮದ ದಾರಗಳಿಂದಲೇ ಬಿಗಿದು ಕಟ್ಟಿ ಸಿದ್ಧಗೊಳಿಸುತ್ತಾರೆ. ಈ ಚರ್ಮದ ಮೇಲೆ ವಿವಿಧ ಬಣ್ಣಗಳಿಂದ ವೈವಿಧ್ಯಮಯ ಚಿತ್ರಗಳನ್ನು ಬಿಡಿಸಿರುತ್ತಾರೆ.



ಜಗ್ಗಲಿಗೆಯನ್ನು ರಣಹಲಿಗೆ ಎಂದೂ ಕರೆಯುತ್ತಾರೆ. ಈ ಹಲಿಗೆಯನ್ನು ಕೈಯಿಂದ ಎತ್ತಿ ಹಿಡಿದು ಬಾರಿಸಲು ಸಾಧ್ಯವಿಲ್ಲ. ನೆಲದ ಮೇಲೆ ಉರುಳಿಸುತ್ತಾ ಬಾರಿಸುತ್ತಾರೆ. ಜಗ್ಗಲಿಗೆ ಮೇಳದಲ್ಲಿ ಸುಮಾರು ೧೫ ರಿಂದ ೨೦ ಮಂದಿ ಕಲಾವಿದರು ಪಾಲ್ಗೊಳ್ಳುತ್ತಾರೆ. ನಿಲುವಂಗಿ, ಕಚ್ಚೆ, ಧೋತರ ಧರಿಸಿ, ತಲೆಗೆ ರುಮಾಲು ಸುತ್ತಿ ಸೊಂಟಕ್ಕೆ ನಡುವಸ್ತ್ರ ಕಟ್ಟಿದ ಕಲಾವಿದರು ಚಕ್ಕಡಿ ಗಾಲಿಯಷ್ಟು ಸುತ್ತಳತೆಯುಳ್ಳ ಜಗ್ಗಲಿಗೆಗಳನ್ನು ಎಡಗೈಯಿಂದ ಉರುಳಿಸುತ್ತಾ ಬಲಗೈಯಿಂದ ತಾಳದ ವಿವಿಧ ಗತ್ತುಗಳಿಗೆ ಅನುಗುಣವಾಗಿ ಬಡಿಯುತ್ತಾರೆ. ಜಗ್ಗಲಿಗೆ ಬಾರಿಸುವಾಗ ಎಡಗೈ ಮತ್ತು ಬಲಗೈ ಎರಡೂ ಕ್ರಮಬದ್ಧವಾದ


ನಡೆಯನ್ನುಳ್ಳವುಗಳಾಗಿರಬೇಕು. ಕ್ರಮ ತಪ್ಪಿದರೆ ವಾದ್ಯ ಉರುಳಿ ಹೋಗುತ್ತದೆ, ಇಲ್ಲವೆ ತಾಳ ತಪ್ಪುತ್ತದೆ.

ಜಗ್ಗಲಿಗೆ ಮೇಳದ ಮುಖ್ಯಸ್ಥನು 'ಕಣಿ' ಎಂದು ಕರೆಯುವ ಚಿಕ್ಕ ಹಲಗೆಯನ್ನು ಎಡಗೈಯಲ್ಲಿ ಹಿಡಿದು ಬಲಗೈಯಿಂದ ಬಾರಿಸುತ್ತಾನೆ. ಮುಖ್ಯಸ್ಥನು ಕಣಿಯನ್ನು ಬಾರಿಸುವಾಗ ಯಾವ ತಾಳಗಳನ್ನು ಅನುಸರಿಸುತ್ತಾನೋ ಅದೇ ತಾಳಗಳನ್ನು ಜಗ್ಗಲಿಗೆ ಬಡಿಯುವವರು ಅನುಸರಿಸುತ್ತಾರೆ. ಜಗ್ಗಲಿಗೆ ಮೇಳದಲ್ಲಿನ ಕಲಾವಿದರ ಕುಣಿತದ ಗತ್ತುಗಳು ಅಲಾವಿ ಕುಣಿತದ ಮತ್ತು ಹೆಜ್ಜೆ ಕುಣಿತದ ಗತ್ತುಗಳನ್ನು ಹೋಲುತ್ತವೆ. ಜಗ್ಗಲಿಗೆಗಳ ಸಾಮೂಹಿಕ ಬಡಿತವು ಕೇಳುಗರಲ್ಲಿ ರೋಮಾಂಚನವನ್ನು ಉಂಟುಮಾಡುತ್ತದೆ. ಕಲಾವಿದರು ವೀರಾವೇಶದಿಂದ ರಣಹಲಿಗೆಯನ್ನು ಬಡಿಯುತ್ತಾ, ಕುಣಿಯುತ್ತಾ ಚಲಿಸುತ್ತಿರುತ್ತಾರೆ. ಸರಸರ ಹರಿದಾಡುತ್ತಾರೆ. ಒಬ್ಬರ ಪಕ್ಕ ಒಬ್ಬರು, ಒಬ್ಬರ ಹಿಂದೆ ಒಬ್ಬರು ಅಡ್ಡಲಾಗಿ, ಎದುರು ಬದುರಾಗಿ, ತ್ರಿಕೋನಾಕಾರದಲ್ಲಿ ಹೀಗೆ ವಿವಿಧ ವಿನ್ಯಾಸಗಳಲ್ಲಿ ನಿಂತು ಬಡಿಯುವುದನ್ನು ಕಂಡಾಗ ಮೈನವಿರೇಳುತ್ತದೆ. ಜಗ್ಗಲಿಗೆಯನ್ನು ನಾಲ್ಕು ಜನ ಎತ್ತಿ ಹಿಡಿದು, ಅದರ ಮೇಲೆ ಮುಖ್ಯಸ್ಥನು ನಿಂತು ಕಣಿಯನ್ನು ಬಾರಿಸುವುದನ್ನು ನೋಡಲು ಬಲು ಚಂದ.

## ಜೋಗತಿ ಕುಣಿತ

ಜೋಗತಿಯರು ಸವದತ್ತಿ ಎಲ್ಲಮ್ಮನ ದೇವರ ಗುಡ್ಡರು ಅಂದರೆ ಭಕ್ತರು. ಯಲ್ಲಮ್ಮನ ಮೂರ್ತಿಯನ್ನು ಇರಿಸಿರುವ ತುಂಬಿದ ಕೊಡ ಇಲ್ಲವೆ ಬುಟ್ಟಿಯನ್ನು ಹೊತ್ತುಕೊಂಡು ಯಲ್ಲಮ್ಮ ತಾಯಿಯ ಮಹಿಮೆ,

ಪವಾಡಗಳನ್ನು ಹೊಗಳುತ್ತಾ ಊರಿಂದೂರಿಗೆ ಸಂಚರಿಸುತ್ತಾರೆ. ಜೋಗತಿಯರು ಹೊರುವ ಬುಟ್ಟಿಯನ್ನು 'ಝುಗ' ಎಂದು ಕರೆಯುತ್ತಾರೆ. ಝುಗವನ್ನು ತಲೆಯ ಮೇಲೆ ಹೊತ್ತು ತಿರುಗುವುದರಿಂದ ಜೋಗತಿಯರು ಎನ್ನುತ್ತಾರೆ.



ಜೋಗತಿಯರು ಯಲ್ಲಮ್ಮ ದೈವ ಸಂಪ್ರದಾಯದ ಪ್ರಸಾರಕರು. ಹಿರಿಯ ಜೋಗತಿಯರಲ್ಲಿ ಸ್ತ್ರೀಯರು ಮತ್ತು ಪುರುಷರು ಇಬ್ಬರೂ ಇರುತ್ತಾರೆ. ಜೋಗತಿಯರಲ್ಲಿ ಝುಗ ಹೊತ್ತ ಜೋಗತಿಯರು, ಕೊಡ ಹೊತ್ತವರು, ಚೌಡಿಕೆ ಜೋಗಿಗಳು ಎಂದು ಮೂರು ವಿಧಗಳಿವೆ. ಬಿಳಿ ಸೀರೆ, ಕೈಯಲ್ಲಿ ಜಾಗಟೆ ಇಲ್ಲವೆ ಕರಡಿ ಕೂದಲಿನ ಚೌರಿ, ಕೊರಳಲ್ಲಿ ಕವಡೆ ಸರ, ಕಾಲಿಗೆ ಗೆಜ್ಜೆ, ಹಣೆಗೆ ಅಗಲವಾದ ಕುಂಕುಮ, ಅರಿಶಿಣ, ಭಂಡಾರ, ಮುಡಿಯ ತುಂಬಾ ಹೂವು, ತಲೆಯ ಮೇಲೆ ಯಲ್ಲಮ್ಮನ ಝುಗ ಅಥವಾ ಹಡ್ಲಗೆ ಅಥವಾ ಯಲ್ಲಮ್ಮನ ಮೂರ್ತಿ ಇರುವ

ನವಿಲುಗರಿ ಬಣ್ಣದ ವಸ್ತ್ರದಿಂದ ಅಲಂಕರಿಸಿದ ನೀರು ತುಂಬಿದ ಕೊಡ ಇವಿಷ್ಟೂ ಜೋಗತಿಯರ ವೇಷಭೂಷಣಗಳು.

ಜೋಗತಿಯರು ಸಾಮಾನ್ಯವಾಗಿ ತಲೆಯ ಮೇಲಿನ ಝುಗವನ್ನಾಗಲಿ, ಕೊಡವನ್ನಾಗಲಿ ಕೈಗಳಲ್ಲಿ ಹಿಡಿಯುವುದಿಲ್ಲ. ಏಳುವಾಗ, ಕೂಡುವಾಗ, ನಡೆದಾಡುವಾಗ, ಕುಣಿಯುವಾಗ ಹೀಗೆ ಎಲ್ಲಾ ಸಂದರ್ಭಗಳಲ್ಲೂ ಅದು ದೇಹದ ಒಂದು ಅಂಗವೇ ಆಗಿದೆ ಎನ್ನುವಷ್ಟರಮಟ್ಟಿಗೆ ಸಮತೋಲನದಲ್ಲಿರುತ್ತದೆ. ಜೋಗತಿಯರು ತಮ್ಮ ಕುಣಿತವನ್ನು ಜೋಗಾಡುವುದು, ಜೋಗೇರಾಟ ಎಂದು ಕರೆಯುತ್ತಾರೆಯೇ ಹೊರತು ಕುಣಿತ ಎಂದು ಕರೆದುಕೊಳ್ಳುವುದಿಲ್ಲ.

ಜೋಗತಿಯರ ಕುಣಿತಕ್ಕೆ ಚೌಡಿಕೆ, ತುಂತುಣಿ, ಸಂಬಾಳ ಹಿಮ್ಮೇಳದ ವಾದ್ಯಗಳು. ಜೋಗತಿಯರ ಕುಣಿತದಲ್ಲಿ ವೇಗವಿದೆ, ರಭಸವಿದೆ, ಹೆಜ್ಜೆಗಳು ತಟತಟನೆ ಬದಲಾಗುತ್ತಿರುತ್ತವೆ. ಅವರು ಕುಣಿಯುವ, ಗಿರಕಿ ಹೊಡೆಯುವ ವಾಲಾಡುವ ರಭಸಕ್ಕೆ ಝುಗಕ್ಕೆ ಕಟ್ಟಿದ ಅಥವಾ ಕೊಡಕ್ಕೆ ಅಲಂಕರಿಸಿದ ವಸ್ತ್ರ, ಹೂಮಾಲೆಗಳು ಸುತ್ತಲೂ ತಿರುಗುತ್ತಾ ಸುಂದರ ದೃಶ್ಯವೊಂದನ್ನು ಕಲ್ಪಿಸುತ್ತವೆ. ಒಬ್ಬರಿಗಿಂತ ಹೆಚ್ಚು ಜೋಗತಿಯರು ಕುಣಿಯುವಾಗಲಂತೂ ಸ್ಪರ್ಧಾತ್ಮಕ ಕುಣಿತ ಏರ್ಪಡುತ್ತದೆ. ಕುಣಿತದ ಜೊತೆಗೆ ಯಲ್ಲಮ್ಮನ ಹೊಗಳಿಕೆಯ ಪದಗಳನ್ನು ಹಾಡುತ್ತಾರೆ. ಜೋಗತಿಯರ ಕುಣಿತದಲ್ಲಿ ಜೋಗತಿಯರಿಗೆ ದೇವಿಯು ಮೈದುಂಬುವುದುಂಟು. ಜೋಗತಿಯರು ಕುಣಿಯುತ್ತಾ ತಲೆಯ ಮೇಲಿನ ಕೊಡವಾಗಲಿ, ಝುಗವಾಗಲಿ ಕೆಳಗೆ ಬೀಳದಂತೆ ನೆಲದ ಮೇಲಿರಿಸಿದ ನಾಣ್ಯ, ರೂಪಾಯಿ ನೋಟುಗಳನ್ನು ಕಣ್ಣಿನ ರೆಪ್ಪೆ, ಬಾಯಿಯಿಂದ ತೆಗೆಯುವ ಚಮತ್ಕಾರಗಳನ್ನು ಮಾಡುತ್ತಾರೆ.

# ಡೊಳ್ಳಿನ ಕೈಪೆಟ್ಟು

'ದಿಲ್ಲಿಗೆ ಹೋದರು ಡೊಳ್ಳಿಗೆ ಒಂದೇ ಪೆಟ್ಟು' ಎನ್ನುವ ಗಾದೆ ಇದೆ. ಕರ್ನಾಟಕದಾದ್ಯಂತ ಡೊಳ್ಳು ಮೇಳಗಳು ಕುಣಿತದೊಂದಿಗೆ ಪ್ರದರ್ಶನಗೊಳ್ಳುತ್ತವೆ. ಆದರೆ ಧಾರವಾಡ, ಬಾಗಲಕೋಟೆ ಜಿಲ್ಲೆಗಳಲ್ಲಿ ಡೊಳ್ಳನ್ನು ಕುಣಿಯುತ್ತಾ ಬಾರಿಸುವುದರೊಂದಿಗೆ ಡೊಳ್ಳಿನ ಮೇಲೆ ಕೈಪೆಟ್ಟು ಹಾಕುತ್ತಾ ಅದನ್ನು ತಾಳವನ್ನಾಗಿ ಬಳಸಿಕೊಂಡು ಡೊಳ್ಳಿನ ಪದಗಳನ್ನು ಹಾಡುವ ಸಂಪ್ರದಾಯವೂ ಇದೆ. ಇದನ್ನು ಡೊಳ್ಳಿನ ಕೈಪೆಟ್ಟು ಎಮದು ಕರೆಯುತ್ತಾರೆ. ಡೊಳ್ಳಿನ ಪದಗಳಲ್ಲಿ ಉತ್ತಮ ಸಾಹಿತ್ಯಾಂಶವು ಅಡಗಿದೆ. ತಂಡದ ನಾಯಕ ಡೊಳ್ಳಿನ ಮೇಲೆ ಕೈಪೆಟ್ಟು ಹಾಕುತ್ತಾ ಪದ ಹೇಳಲಾರಂಭಿಸಿದರೆ ಉಳಿದವರು ಅದನ್ನು ಪುನರುಚ್ಚರಿಸುತ್ತಾರೆ.

ಶಿವನೆ ನಮ್ಮಯ ದೇವರು ಬಂದಾವ ಬನ್ನಿರೇ
ಸ್ವಾಮಿ ನಮ್ಮಯ ದೇವರು ಬಂದಾವ ಬನ್ನಿರೇ

ಎಂಬ ಪಲ್ಲವಿಯೊಡನೆ ಆರಂಭವಾಗುವ ಡೊಳ್ಳಿನ ಪದಗಳಲ್ಲಿ ಬಿಡಿ ಹಾಡುಗಳಷ್ಟೇ ಅಲ್ಲದೆ ಮೈಲಾರ ಲಿಂಗನ ಕಥೆ, ಹಾಲುಮತ ಪುರಾಣ, ಮಾರ್ಕಂಡೇಯ ಚರಿತ್ರೆ, ನಿಂಬೆಕ್ಕನ ಪದ, ಪಾಂಡವರ ಪದ, ತಿರುನೀಲಕಂಠ, ಬೀರಲಿಂಗೇಶ್ವರನ ಪದ, ರೇವಣಸಿದ್ದೇಶ್ವರ, ಮಾಳಪ್ಪ–ದ್ಯಾಮವ್ವ ಮುತಾದ ಪೌರಾಣಿಕ ಮತ್ತು ಭಕ್ತಿ ಪ್ರಧಾನ ಕಥೆಗಳನ್ನು ಹಾಡುತ್ತಾರೆ. ಗದ್ಯಪದ್ಯ ಮಿಶ್ರಿತವಾದ ಚಂಪೂಶೈಲಿಯ ಕಥಾನಕಗಳ ಹಾಡುಗಾರಿಕೆ ಸೊಗಸಾಗಿರುತ್ತದೆ.

# ದಟ್ಟೀ ಕುಣಿತ

ಬೆಳಗಾವಿ ಜಿಲ್ಲೆಯಲ್ಲಷ್ಟೇ ಕಂಡುಬರುವ ದಟ್ಟೀಕುಣಿತ ಅಥವಾ ದಟ್ಟಿಯಾಟವು ಅದ್ವಿತೀಯ ಸಾಧನೆಯ ಕಸರತ್ತುಗಳಿಂದ ಕೂಡಿದ ಕಲಾಪ್ರಕಾರ. ಶುಂಭ–ನಿಶುಂಭ ಮತ್ತು ಮಹಿಷಾಸುರರ ಸಂಹಾರಕ್ಕಾಗಿ ದುರ್ಗೆಯ ಅವತಾರ ತಾಳಿದ ಪಾರ್ವತಿಯು ದಟ್ಟಿ ತೊಟ್ಟು ನರ್ತಿಸುತ್ತಾ ರಾಕ್ಷಸ ಸಂಹಾರ ಮಾಡಿದ್ದರ ಸಂಕೇತವಾಗಿ ದಟ್ಟೀ ಕುಣಿತ ರೂಢಿಗೆ ಬಂದಿತೆಂಬುದು ಕಲಾವಿದರ ಅಭಿಪ್ರಾಯ. ಉತ್ತರ ಕರ್ನಾಟಕದ ಕುರುಬ ಸಮುದಾಯವು ತಮ್ಮ ಕುಲದೈವವಾದ ಬೀರಪ್ಪನ ಆರಾಧನೆಯ ಅಂಗವಾಗಿ ದಟ್ಟಿ ಕುಣಿತವನ್ನು ಪ್ರದರ್ಶಿಸುವುದುಂಟು.

ಸಾಮಾನ್ಯವಾಗಿ ಹತ್ತರಿಂದ ಹದಿನಾರು ಮಂದಿ ಕಲಾವಿದರು ಪಾಲ್ಗೊಳ್ಳುವ ಈ ಕುಣಿತದಲ್ಲಿ ನಾಲ್ಕರಿಂದ ಆರು ಮಂದಿ



ವಾದ್ಯಮೇಳದವರಿರುತ್ತಾರೆ. ಉಳಿದವರೆಲ್ಲಾ ಕುಣಿತದವರು. ಕೆಂಪು ನಿಲುವಂಗಿ ಧರಿಸಿ, ಕೆಂಪು ಇಜಾರ ಇಲ್ಲವೆ ಪೈಜಾಮ ತೊಟ್ಟಿರುತ್ತಾರೆ. ನಡುವಿಗೆ ನಡುಕಟ್ಟು, ತಲೆಗೆ ರುಮಾಲು, ಅಂಗಿಯ ಮೇಲೆ ಕುತ್ತಿಗೆಯಿಂದ ಇಳಿಬಿಟ್ಟ ಕೆಂಪಂಚಿನ ದೊಡ್ಡ ದಡಿ ಧೋತರ, ಕೈಗಳಲ್ಲಿ ಉದ್ದನೆಯ ವಸ್ತ್ರ, ಕಾಲಲ್ಲಿ ಗೆಜ್ಜೆ, ಕೊರಳಲ್ಲಿ ಸರಮಾಲೆ, ಮುಖಕ್ಕೆ ಅರಿಶಿಣ ಭಂಡಾರ ಇವಿಷ್ಟೂ ಕುಣಿತದವರ ವೇಷಭೂಷಣಗಳು. ವಾದ್ಯಗಾರರು ದಿನನಿತ್ಯದ ಉಡುಪಿನಲ್ಲಿರುತ್ತಾರೆ. ಕೈಪಟ, ತಾಳ ಮತ್ತು ಗುಮಿಕಿ, ಶಹನಾಯ್ ಹಿಮ್ಮೇಳದ ವಾದ್ಯಗಳು. ಇವುಗಳ ಜೊತೆಗೆ ಮತ್ತೆರಡು ದೊಡ್ಡ ಕಂಚಿನ ತಾಳಗಳಿರುತ್ತವೆ. ಕೈಪಟ ಎಂದರೆ ಸಣ್ಣ ಪ್ರಮಾಣದ ಡೊಳ್ಳು. ಗುಮಿಕಿ ಎಂದರೆ ಹೂಜಿಯಾಕಾರದ ಮಣ್ಣಿನ ಮಡಿಕೆಯ ಬಾಯಿಗೆ ಚರ್ಮದ ಹೊದಿಕೆ ಹೊದಿಸಿ ಸಿದ್ಧಪಡಿಸಿದ ವಾದ್ಯ. ಕರಾವಳಿ ಭಾಗದಲ್ಲಿ ಕಂಡುಬರುವ ಗುಮಟೆ ವಾದ್ಯವನ್ನು ಹೋಲುವಂಥದ್ದು.

ದಟ್ಟೀ ಕುಣಿತದಲ್ಲಿ ಹಿಮ್ಮೇಳದ ವಾದ್ಯಗಳೇ ಕುಣಿತದ ಸ್ಫೂರ್ತಿ ಮತ್ತು ಶಕ್ತಿ. ಕೈಪಟ, ತಾಳ, ಸನಾದಿಗಳ ಗತ್ತಿಗೆ ತಕ್ಕಂತೆ ಕಲಾವಿದರು ಒಂದು ಸಾಲು ಇಲ್ಲವೆ ಎರಡು ಸಾಲುಗಳಲ್ಲಿ ನಿಂತು ಎಲ್ಲರೂ ಒಂದೇ ಪ್ರಕಾರವಾಗಿ ಹೆಜ್ಜೆ ಇಡುತ್ತ, ಹಾರುತ್ತ, ಕುಣಿಯುತ್ತ, ಕೂಡುತ್ತ, ಕಾಲು ಜಾಡಿಸುತ್ತ, ಬಾಗುತ್ತ, ಬೀಗುತ್ತ ಕುಣಿಯಲಾರಂಭಿಸುತ್ತಾರೆ. ವಸ್ತ್ರ ಹಿಡಿದ ಕೈಗಳನ್ನು ವಿವಿಧ ಆಕಾರಗಳಲ್ಲಿ, ವಿಭಿನ್ನ ರೀತಿಯಲ್ಲಿ ಬೀಸುತ್ತ ಎಡಕ್ಕೆ ಎರಡ್ಹೆಜ್ಜೆ, ಬಲಕ್ಕೆ ಎರಡ್ಹೆಜ್ಜೆ, ಮುಂದಕ್ಕೆ ಮೂರ್ಹೆಜ್ಜೆ ಜಿಗಿದು, ಗಿರ್ರನೆ ತಿರುಗಿ ಕುಳಿತು, ಚಕ್ಕನೆ ಮೇಲೆದ್ದು ಹಿಂದೆ ಸರಿದು, ಒಮ್ಮೆಲೆ ಕಾಲು ಮೇಲೆ ಮಾಡಿ ಹಿಂದಕ್ಕೆ ಮುಂದಕ್ಕೆ ಲಾಗ ಹೊಡೆಯುವುದು ಇತ್ಯಾದಿ ಕಸರತ್ತುಗಳನ್ನು ಪ್ರದರ್ಶಿಸುತ್ತಾರೆ. ಕೈಪಟ ವಾದನ ತೀವ್ರಗತಿಯಲ್ಲಿದ್ದಾಗ ಕಲಾವಿದರ ಕುಣಿತವೂ ತೀವ್ರಗೊಳ್ಳುತ್ತದೆ. ದಟ್ಟಿ

ಕಲಾವಿದರು ತೋರುವ ವಿಶೇಷ ಕಸರತ್ತಿನ ಚಮತ್ಕಾರಗಳು ರೋಮಾಂಚನ 'ಕಾರಿ ಯಾದುವುಗಳು. ತಲೆಯ ಮೇಲೆ ದೀಪದ ಆರತಿಗಳನ್ನು ಹೊತ್ತು ಮರದ ಉರುಳು ದಿಮ್ಮಿಯ ಮೇಲೆ ನರ್ತಿಸುತ್ತ ಎತ್ತರಕ್ಕೆ ಜೋಡಿಸಿಟ್ಟ ಮರದ ಹಲಗೆಯನ್ನು ಏರುವುದು ಪ್ರೇಕ್ಷಕರನ್ನು ನಿಬ್ಬೆರಗಾಗಿಸುತ್ತದೆ. ರಾತ್ರಿಯ ಹೊತ್ತಿನಲ್ಲಿ ಪಂಜು ಹೊತ್ತಿಸಿಕೊಂಡು ಕುಣಿಯುವ ಕುಣಿತವಂತೂ ವರ್ಣಿಸಲು ಅಸದಳವಾದುದು. ದಟ್ಟೀ ಕುಣಿತದ ಕಲಾವಿದರು ತಮ್ಮ ಸಾಮರ್ಥ್ಯಕ್ಕನುಸಾರವಾಗಿ ವೈವಿಧ್ಯಮಯ ಕಸರತ್ತುಗಳನ್ನು ಪ್ರದರ್ಶಿಸುತ್ತಾರೆ.

## ದುಮ್ಮಾಲಿ ಮೇಳ

ಉತ್ತರ ಕರ್ನಾಟಕದ ಭೋವಿ ಜನಾಂಗದಲ್ಲಿ ರೂಢಿಯಲ್ಲಿರುವ ಜನಪದ ಕುಣಿತ. 'ದಿಮ್ಮಿ ಮೇಳ'. 'ಶಿವಭಜನೆ' ಎಂಬ ಹೆಸರೂ ಇದಕ್ಕಿದೆ. ದಿಮ್ಮಿ ವಾದ್ಯಗಳನ್ನು ಹಿಡಿದು ಹಾಡಿ ಕುಣಿಯುವುದರಿಂದ ಇದು ದುಮ್ಮಾಲಿ ಮೇಳವಾಗಿದೆ. ಕಬ್ಬಿಣದ ಬಳೆಗೆ ಹದಗೊಳಿಸಿದ ಎಳೆಯ ಹೋರಿಗರುವಿನ ಚರ್ಮವನ್ನು ಬಿಗಿದು ಭದ್ರಪಡಿಸಿ ಸಿದ್ಧಪಡಿಸಿದ ವಾದ್ಯವೇ ದಿಮ್ಮಿ. ಈ ದಿಮ್ಮಿಯನ್ನು ತಾಡಿಸುವ ಕಡ್ಡಿಗೆ ಕೊಳಪ ಎಂದು ಕರೆಯುತ್ತಾರೆ. ವಂಶಪಾರಂಪರ್ಯವಾಗಿ ಬೆಳೆದು ಬಂದಿರುವ ಈ ಮೇಳವು ದೈವೀ ಆರಾಧನೆಯ ಕಲೆ ಎನಿಸಿಕೊಂಡಿದೆ. ಪ್ರತಿನಿತ್ಯ ಸಂಜೆ ಕಲಾವಿದರು ಆರಾಧ್ಯದೇವತೆ ಮುರುಗಮ್ಮ ಗುಡಿಯ ಮುಂದೆ ಸೇರಿ ದೇವಿ ಸಮ್ಮುಖದಲ್ಲಿ ದಿಮ್ಮಿ ವಾದ್ಯದೊಂದಿಗೆ ಹಾಡಿಕೊಂಡು ಕುಣಿಯುತ್ತಾರೆ. ಹಬ್ಬ ಹರಿದಿನ, ಜಾತ್ರೆ–ಉತ್ಸವಗಳಲ್ಲಿ ಪ್ರದರ್ಶಿತಗೊಳ್ಳುವ ಈ ಕುಣಿತದಲ್ಲಿ ೧೦–೧೨ ಮಂದಿ ಪಾಲ್ಗೊಳ್ಳುವರು. ಪ್ರತಿಯೊಬ್ಬರೂ ದಿಮ್ಮಿಯನ್ನು ಹಿಡಿದಿರುತ್ತಾರೆ. ಕಲಾವಿದರು ಕಾಲಿಗೆ ಗೆಜ್ಜೆ ಕಟ್ಟಿ ಬಿಳಿ ಸಮವಸ್ತ್ರ ಧರಿಸಿದ್ದರೆ, ತಂಡದ ನಾಯಕನು ಇದರೊಂದಿಗೆ ಜರೀ ಬಟ್ಟೆಯ ಬಣ್ಣದ ಪಟ್ಟಿಯನ್ನು

ಭುಜದಿಂದ ಸೊಂಟಕ್ಕೆ ಬರುವಂತೆ ಕಟ್ಟಿಕೊಂಡಿರುತ್ತಾನೆ. ಈತನೇ ಮೇಳದ ನಿರ್ದೇಶಕ. ಒಬ್ಬನು ಸ್ತ್ರೀವೇಷ ಧರಿಸಿ ಕುಣಿಯುತ್ತ ತಮಾಷೆ ಮಾಡುವನು. ನಾಯಕ ಕೃಷ್ಣನಾದರೆ ಈ ಹೆಣ್ಣು ವೇಷಧಾರಿ ರಾಧೆಯಾಗಿರುತ್ತಾಳೆ.

ಕಲಾವಿದರು ಕೈಯಲ್ಲಿ ದಿಮ್ಮಿ ವಾದ್ಯ ಹಿಡಿದು ವೃತ್ತಾಕಾರವಾಗಿ ನಿಲ್ಲುತ್ತಾರೆ. ದಿಮ್ಮಿಯನ್ನು ಹೊಟ್ಟೆಗೆ ಕಟ್ಟಿಕೊಂಡ ನಾಯಕ ಎರಡು ಕೈಗಳಿಂದಲೂ ದಿಮ್ಮಿಯನ್ನು ಬಾರಿಸುತ್ತ ಉಳಿದವರಿಗೆ ನಿರ್ದೇಶನ ನೀಡುತ್ತಾನೆ. ಉಳಿದ ಕಲಾವಿದರು ವಾದ್ಯದ ಗತ್ತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ ಹಾಡುವರು. ಈ ಹೆಜ್ಜೆಗಳಲ್ಲಿ ಲೇಜಿಮ್ ಹೆಜ್ಜೆ, ಶವಪಾತ ಕುದುರೆ ಹೆಜ್ಜೆ, ಸುಲಾರ್ಷದ ಹೆಜ್ಜೆ ಇತ್ಯಾದಿ ಹತ್ತಾರು ಗತ್ತುಗಳಿವೆ. ಹಾಡುಗಳಲ್ಲಿ ಮುರುಗಮ್ಮನ ಸ್ತುತಿ ಇದೆ. ದುಮ್ಮಾಲಿ ಮೇಳವು ಗುಲಬರ್ಗಾ ಜಿಲ್ಲೆಯಲ್ಲಿ ಪ್ರಚಲಿತದಲ್ಲಿರುವ ಕಲೆ.

## ಪುರವಂತಿಕೆ

ಧಾರವಾಡ, ಹುಬ್ಬಳ್ಳಿ, ಗದಗ್, ರಾಣೆಬೆನ್ನೂರು, ಹಾವೇರಿ ಜಿಲ್ಲೆಗಳಲ್ಲಿ ಪ್ರಚಲಿತದಲ್ಲಿರುವ ಪುರವಂತಿಕೆಯು ಶೈವ ಪರಂಪರೆಗೆ ಸೇರಿದ ವಿಶಿಷ್ಟವಾದ ಧಾರ್ಮಿಕ ಕುಣಿತ. ವೀರಭದ್ರನ ವೀರಾವೇಶದ ಮಹತ್ವವನ್ನು ವೈಭವೀಕರಿಸುವ ದೈವಿಕ ಆಚರಣೆಗಳು ಪುರವಂತಿಕೆಯ ರೂಪದಲ್ಲಿ ಬೆಳೆದು ಬಂದಿವೆ. ಪುರವಂತರ ವೇಷಭೂಷಣಗಳೂ ಸಹ ರುದ್ರ ರಮಣೀಯವಾದುವು. ಪುರವಂತಿಕೆಯ ಕುಣಿತದವರನ್ನು ಪುರವಂತರೆಂದು ಕರೆಯುತ್ತಾರೆ. ರಣಗೂದಲ ಚೌರಿ, ಕಾವಿ ರುಮಾಲು, ಕೆಂಪು ಅಥವಾ ಕಾವಿ ಅಂಗಿ, ಪಂಚಮುದ್ರೆಗಳು, ರುದ್ರಾಕ್ಷಿಯ ಸರಗಳು, ತೋಳುಕಟ್ಟುಗಳು, ಮಣಿಕಟ್ಟುಗಳು. ನಡುವಿಗೆ ಹಿತ್ತಾಳೆಯ ರುಂಡಮಾಲೆಗಳ ಸಾಲು, ಹಣೆಯಲ್ಲಿ ವಿಭೂತಿ, ಶ್ರೀಗಂಧದ ಬಟ್ಟು, ನಾಗಾಭರಣ, ಕೈಯಲ್ಲಿ ಕತ್ತಿ, ವಿವಿಧ

ಉದ್ದಳತೆಗಳುಳ್ಳ ಬೆಳ್ಳಿ ಇಲ್ಲವೆ ತಾಮ್ರದ ಶಸ್ತ್ರಗಳು, ಎದೆಯ ಮೇಲೆ ವೀರಭದ್ರ ದೇವರ ಹಲಗೆ ಇವಿಷ್ಟೂ ಪುರವಂತಿಕೆ ಕಲಾವಿದರ ವೇಷಭೂಷಣಗಳು.

ಶಹನಾಯಿ, ಸಮಾಳಗಳ ವಿವಿಧ ಗತ್ತುಗಳನ್ನು ಅನುಸರಿಸಿ ವೀರಾವೇಶದಿಂದ ಕೇಕೆ ಹಾಕುತ್ತಾ ಕುಣಿಯುತ್ತಾರೆ. ಮಧ್ಯೆ ಮಧ್ಯೆ



ವೀರಭದ್ರನ ಪರಾಕ್ರಮವನ್ನು ವರ್ಣಿಸುತ್ತಾ ಒಬ್ಬ ಕಲಾವಿದ ಸಾಭಿನಯವಾಗಿ ಒಡಬು ಹೇಳುತ್ತಿದ್ದರೆ, ಇನ್ನೊಬ್ಬ 'ಖಡೆ ಖಡೇ ಭಲರೆ ಆಹಾ' ಎನ್ನುತ್ತಾ ವರ್ಣನೆಯ ಕಥನಕ್ಕೆ ಸ್ಫೂರ್ತಿ ನೀಡುತ್ತಿರುತ್ತಾನೆ. ಒಡಪುಗಳ ಪ್ರತಿಯೊಂದು ಸಾಲಿಗೂ ಸಮಾಳ ದನಿ ನೀಡುತ್ತಿರುತ್ತದೆ. ಪುರವಂತರು ಬಿರುಸಾದ ಹೆಜ್ಜೆ ಹಾಕುತ್ತಾ ಕುಣಿಯಲಾರಂಭಿಸುತ್ತಾರೆ. ಈ ಕುಣಿತದಲ್ಲಿ ಸಮರಾವೇಶವಿದೆ, ವೀರತ್ವದ ಪೌರುಷವಿದೆ, ರೌದ್ರತೆ ಇದೆ.


ಪುರವಂತರ ಕಲಾಪ್ರದರ್ಶನದಲ್ಲಿ ಕಂಡುಬರುವ ಶಸ್ತ್ರಪವಾಡಗಳು ಪ್ರೇಕ್ಷಕರ ಎದೆ ಜಲ್ಲೆನಿಸುವಂತಿರುತ್ತವೆ. ದೇಹದ ವಿವಿಧ ಭಾಗಗಳಿಗೆ ಶಸ್ತ್ರಗಳನ್ನು ಚುಚ್ಚಿಕೊಂಡು ಕುಣಿಯುವುದೇ ಶಸ್ತ್ರಪವಾಡ. ಫಣಿ ಶಸ್ತ್ರ, ನಾಭಿ ಶಸ್ತ್ರ, ಕಂಠ ಶಸ್ತ್ರ, ಗುಪ್ತ ಶಸ್ತ್ರ ಹೀಗೆ ಹತ್ತಾರು ಬಗೆಯ ಶಸ್ತ್ರ ಪವಾಡಗಳನ್ನು ನಡೆಸುತ್ತಾರೆ. ಕಲಾವಿದರು ಎದುರು ಬದುರಾಗಿ ನಿಂತು ಪರಸ್ಪರರ ತುಟಿ–ನಾಲಿಗೆಗಳನ್ನು ಶಸ್ತ್ರಗಳಿಂದ ಬಂಧಿಸಿಕೊಳ್ಳುವುದು, ದಾರವನ್ನು ಹೊಟ್ಟೆಯ ಚರ್ಮದ ಮೂಲಕ ಒಳ ತೂರಿಸಿ ಹೊರತೆಗೆಯುವುದು ಇತ್ಯಾದಿಗಳನ್ನು ನಡೆಸುತ್ತಾರೆ. ಕುಲದೈವವಾದ ವೀರಭದ್ರನ ಸಾಹಸ, ವೀರಾವೇಶಗಳನ್ನು ಒಡಬು ಮತ್ತು ಕುಣಿತಗಳ ಮೂಲಕ ಪ್ರದರ್ಶಿಸುವ ಪುರವಂತಿಕೆ ಕುಣಿತವು ಶಸ್ತ್ರ ಪವಾಡಗಳಿಂದ ಹೊರತಾದರೆ ಆರೋಗ್ಯಕರ.

## ಬಹುರೂಪಿಗಳು

ಬಹುರೂಪಿಗಳನ್ನು ಹಗಲುವೇಷಗಾರರು ಎಂದು ಕರೆಯುತ್ತಾರೆ. ಕರ್ನಾಟಕದಲ್ಲಿ ಹಗಲುವೇಷ ಹಾಕುವ ಬುಡ್ಗಜಂಗಾಲು ಜನಾಂಗವು ರಾಯಚೂರು, ಗುಲಬರ್ಗಾ, ಬಳ್ಳಾರಿ, ಕೋಲಾರ, ಚಿತ್ರದುರ್ಗ ಜಿಲ್ಲೆಗಳಲ್ಲಿ ಹೆಚ್ಚಾಗಿಯೂ, ಬಿಜಾಪುರ, ಧಾರವಾಡ, ಬೆಳಗಾವಿ, ತುಮಕೂರು, ಹಾಸನ, ಶಿವಮೊಗ್ಗ, ಬೆಂಗಳೂರು ಜಿಲ್ಲೆಗಳಲ್ಲಿ ವಿರಳವಾಗಿಯೂ ಕಂಡುಬರುತ್ತದೆ.

ಬಹುರೂಪಿಗಳು ಹಗಲಿನಲ್ಲಿ ವೇಷಗಳನ್ನು ಧರಿಸಿಕೊಂಡು ಮೂರು ದಿನ, ಐದು ದಿನ, ಏಳು ದಿನ, ಒಂಭತ್ತು ದಿನ ಹೀಗೆ ಯಾವುದಾದರೊಂದು ಅವಧಿಯನ್ನು ನಿಗದಿಪಡಿಸಿಕೊಂಡು ಊರಾಡಲು ಹೋಗುತ್ತಾರೆ. ದಿನನಿತ್ಯ ವೈವಿಧ್ಯಮಯ ವೇಷಗಳನ್ನು ಧರಿಸಿಕೊಂಡು ಮನೆ ಮನೆಗಳಿಗೆ ಭಿಕ್ಷೆಗಾಗಿ ಹೋಗುವುದುಂಟು.

ಸಾಮಾನ್ಯವಾಗಿ ಇವರು ಊರಾಡುವ ಅವಧಿಯು ಆಯಾ ಊರಿನ ಜನಸಂಖ್ಯೆ, ಮನೆಗಳ ಸಂಖ್ಯೆ, ವೇಷಗಳ ಸಂಖ್ಯೆಯನ್ನು ಅವಲಂಬಿಸಿರುತ್ತದೆ. ಹಗಲುವೇಷಗಳನ್ನು ಧರಿಸುವುದನ್ನೇ ಪ್ರಧಾನ ಕಸುಬಾಗುಳ್ಳ ಬುಡ್ಗ ಜಂಗಾಲರು ಮನಮೋಹಕವಾದ, ಕಣ್ಮನ ಸೆಳೆಯುವ, ವೀರಾವೇಶವನ್ನು ಉಕ್ಕಿಸುವ, ಧಾರ್ಮಿಕತೆಯನ್ನು ಪ್ರಚೋದಿಸುವ ವೇಷಗಳನ್ನು ಧರಿಸುತ್ತಾರೆ. ಮೋಹಿನಿ ಭಸ್ಮಾಸರ, ಆಂಜನೇಯ, ಭೀಮ, ರಾಮ, ಲಕ್ಷ್ಮಣ, ವಾಲಿ, ಸುಗ್ರೀವ, ಸುಂದೋಪಸುಂದ, ಕಿರಾತಾರ್ಜುನ, ಅರ್ಧನಾರೀಶ್ವರ, ಬೈರಾಗಿ, ಸಿದ್ಧ, ಲವಕುಶ, ದಾನಶೂರ ಕರ್ಣ ಮುಂತಾದ ವೇಷಗಳ ಜೊತೆಗೆ, ನೋಡಿದ ಕೂಡಲೇ ನಗು ಉಕ್ಕಿ ಬರುವಂತಹ ದಾಸ, ಕೋಡಂಗಿ, ಪೊಲೀಸ್, ಬೈರಾಗಿ, ಬೋಡಮ್ಮ ಮುಂತಾದ ವೇಷಗಳನ್ನು ಧರಿಸುತ್ತಾರೆ.



ಹಗಲು ವೇಷಗಾರರು ತಾವು ಧರಿಸುವ ವೇಷಗಳಿಗೆ ಬೇಕಾದ ಉಡುಗೆ ತೊಡುಗೆಗಳನ್ನು ತಾವೇ ಸಿದ್ಧಪಡಿಸಿಕೊಳ್ಳುತ್ತಾರೆ. ಬಣ್ಣಗಳಿಗೆ ಇದ್ದಿಲು, ತೆಳುವಾದ ತಗಡು, ಬಂಗಾರ ಬಣ್ಣದ ಚಿನ್ನಾರಿ ಪುಡಿ, ಥಳುಕು ಬಳುಕಿನ ಮಣಿಸರಗಳು, ಮಿಂಚುವ, ಮಿರುಗುವ ಜರಿಪಟ್ಟಿಗಳು, ಗಿಲೀಟು ಆಭರಣಗಳು, ರಂಗುರಂಗಿನ ಸೀರೆಗಳು, ಪಂಚೆಗಳು ಇತ್ಯಾದಿಗಳನ್ನು ಬಳಸುತ್ತಾರೆ, ಹಗಲು ವೇಷಗಾರರು

ಸಂಗೀತ ಪ್ರಧಾನವಾದ ಕಥಾ ಸಂದರ್ಭಗಳನ್ನು ಆರಿಸಿಕೊಂಡು ವೇಷ ಹಾಕುವುದರಿಂದ ಇವರಲ್ಲಿ ಪ್ರತಿಯೊಬ್ಬರಿಗೂ ಮಧುರವಾಗಿ ಹಾಡಲು ಬರುತ್ತದೆ. ಹಾಡುಗಾರಿಕೆಗೆ ವೀಣೆಯಾಕಾರದ ತಂಬೂರಿ, ಬುಡ್ಗ, ಗಗ್ಗರ, ಹಾರ್ಮೋನಿಯಂ, ತಬಲ ಮುಂತಾದುವುಗಳನ್ನು ಹಿಮ್ಮೇಳದ ವಾದ್ಯಗಳನ್ನಾಗಿ ಬಳಸುತ್ತಾರೆ.

ಹಗಲು ವೇಷಗಾರರ ಅತಿ ಮುಖ್ಯವಾದ ಸಾಂಪ್ರದಾಯಿಕ ವಾದ್ಯ ಬುಡ್ಗ, ಚರ್ಮದಿಂದ ಮುಚ್ಚಿದ ಒಂದು ಅಗಲವಾದ ಬಾಯಿ, ಮತ್ತೊಂದು ಬದಿಯಲ್ಲಿ ತೆರೆದ ಸಣ್ಣ ಬಾಯಿಯನ್ನು ಹೊಂದಿರುವ ಮತ್ತು ನಡುವಿನಲ್ಲಿ ಉಬ್ಬಿರುವ ಹಿತ್ತಾಳೆಯ ಕೊಳವೆಗೆ ಬುಡ್ಗ ಎಂದು ಕರೆಯುತ್ತಾರೆ. ಬಲಗೈಯಿಂದ ಅಗಲ ಬಾಯಿ ಚರ್ಮವನ್ನು ಬಡಿಯುತ್ತಾ ಎಡಗೈನಿಂದ ತೆರೆದ ಭಾಗವನ್ನು ಮುಚ್ಚುವುದು, ತೆಗೆಯುವುದು ಮಾಡುತ್ತಾರೆ. ಬುಡ್ಗವಾದನವು ಇಂಪಾದ ನಾದವನ್ನು ಹೊರಹೊಮ್ಮಿಸುತ್ತದೆ.

ವೇಷಗಳನ್ನು ಧರಿಸುವಾಗ ವೇಷಗಳು ಮತ್ತು ಕಥಾ ಸಂದರ್ಭಗಳಿಗೆ ತಕ್ಕಂತೆ ಕುಣಿಯುತ್ತಾರೆ. ಹಗಲು ವೇಷಗಾರರ ಅತೀ ಮುಖ್ಯವಾದ ಹಾಗೂ ಜನಾಕರ್ಷಣೀಯವಾದ ವೇಷವೆಂದರೆ ಅರ್ಧನಾರೀಶ್ವರ ವೇಷ. ಒಬ್ಬನೇ ವ್ಯಕ್ತಿ ಶಿವ ಮತ್ತು ಪಾರ್ವತಿಯರ ವೇಷವನ್ನು ಧರಿಸುತ್ತಾನೆ. ದೇಹದ ಬಲ ಅರ್ಧದಲ್ಲಿ ಶಿವ, ದೇಹದ ಎಡ ಅರ್ಧದಲ್ಲಿ ಪಾರ್ವತಿ ವೇಷಗಳಿರುತ್ತವೆ. ತಲೆಗೂದಲನ್ನು ನೆತ್ತಿಯ ಮೇಲೆ ತುರುಬು ಕಟ್ಟಿ ಅರ್ಧಚಂದ್ರಾಕಾರದ ಬೆಳ್ಳಿಯ ಬಣ್ಣದ ತಗಡು ಸಿಕ್ಕಿಸಿ ಎಡಭಾಗಕ್ಕೆ ಹೂವು ಮುಡಿಯುತ್ತಾರೆ. ಮುಖದ ಬಲಭಾಗಕ್ಕೆ ಹಸಿರು ಬಣ್ಣ, ಎಡಭಾಗಕ್ಕೆ ಗುಲಾಬಿ ಬಣ್ಣ, ಬಲಹಣೆಯ ಮೇಲೆ ಅರ್ಧಭಾಗದ ಮೂರು ಬಿಳಿಯ ಪಟ್ಟಿ ಎಳೆದು ಅದರ ಮೇಲೆ ಕೆಂಪು

ಬಟ್ಟು ಇಟ್ಟರೆ, ಎಡಭಾಗದ ಹಣೆಗೆ ಕೆಂಪು ಬಣ್ಣದ ಬೊಟ್ಟು ಮಾತ್ರ ಎಡುತ್ತಾರೆ. ಮೂಗಿನ ಕೆಳಗೆ ಬಲಭಾಗಕ್ಕೆ ಚೂಪಾದ ಕರಿಯ ಮೀಸೆ ಇರುತ್ತದೆ. ಎಡಭಾಗದಲ್ಲಿ ಏನನ್ನೂ ಇಡುವಂತಿಲ್ಲ. ಮೂಗುತಿ ಹಾಕಿಕೊಂಡಿರುತ್ತಾರೆ. ಕುತ್ತಿಗೆ ಬಲಭಾಗಕ್ಕೆ ಹೆಡೆ ಬಿಚ್ಚಿದ ಬಟ್ಟೆಯ ಹೆಡೆ ಎತ್ತಿದ ಹಾವು, ಎಡಭಾಗಕ್ಕೆ ಹೊಳೆಯುವ ಕಂಠೀಹಾರ, ಬಲತೋಳು ಮತ್ತು ಎದೆಯ ಬಲಭಾಗಕ್ಕೆ ವಿಭೂತಿಯ ಬಿಳಿಯ ಪಟ್ಟೆಗಳು, ಎಡಭಾಗದಲ್ಲಿ ಬಣ್ಣದ ಕುಪ್ಪಸ, ಬಲ ಮುಂಗೈ ಮೇಲೆ ವಿಭೂತಿ ಪಟ್ಟೆ, ಎಡ ಮುಂಗೈಗೆ ಬಳೆ, ಸೊಂಟದ ಬಲಭಾಗಕ್ಕೆ ಹುಲಿ ಚರ್ಮದ ಬಟ್ಟೆ, ಎಡಭಾಗಕ್ಕೆ ಕಚ್ಚೆ ಹಾಕಿ ಉಟ್ಟ ರೇಷ್ಮೆ ಸೀರೆ, ತಲೆಯ ತುರುಬಿನಿಂದ ಬೆನ್ನಿನ ಮೇಲೆ ಇಳಿಬಿದ್ದ ಬಣ್ಣದ ವಸ್ತ್ರ. ಈಶ್ವರನ ಪಾತ್ರ ಕಾಣುವಾಗ ಬಟ್ಟೆಯಿಂದ ದೇಹದ ಎಡಭಾಗವನ್ನು ಮುಂದಿನಿಂದ ಅಂದರೆ ಮೂಗಿನ ನೇರದಲ್ಲಿ ಮುಚ್ಚುತ್ತಾನೆ. ಪಾರ್ವತಿ ವೇಷ ಕಾಣುವಂತೆ ಮಾಡುವಾಗ ಈಶ್ವರನ ವೇಷವನ್ನು ಮುಚ್ಚಿಕೊಳ್ಳುತ್ತಾನೆ. ಅಡಿಯಿಂದ ಮುಡಿಯವರೆಗೆ ಸಮಪ್ರಮಾಣದಲ್ಲಿ ಗೆರೆ ಕೊರೆದಂಥ ವೇಷ.

ಬಹುರೂಪಿಗಳು ಚಲಿಸುವ ರಂಗಭೂಮಿ ಇದ್ದಂತೆ. ಪ್ರೇಕ್ಷಕರು ಇರುವಲ್ಲಿಗೇ ಹೋಗೆ ಅವರಿಗೆ ನಾಟಕ ನೋಡಿದ ಅನುಭವವನ್ನು ತಂದುಕೊಡುತ್ತಾರೆ. ಇವರ ಪಾತ್ರೋಚಿತ ವೇಷ ಭೂಷಣಗಳು, ಮುಖವರ್ಣಿಕೆಗಳು,ಹಾಡು-ಸಂಭಾಷಣೆ, ಆಂಗಿಕ ಅಭಿನಯ ಗಳೆಲ್ಲವೂ ತಲೆದೂಗಿಸುವಂಥವು. ಹಾಡು-ಕುಣಿತ, ಭಾಷಾಶೈಲಿ, ರಂಗಪ್ರಜ್ಞೆ, ಅಚ್ಚರಿಗೊಳಿಸುವಂಥದ್ದು.

# ಭಜನಾ ಬಾರೋಡ್

ಭಜನೆ ಮತ್ತು ಬಯಲಾಟ ಎರಡರ ಸಂಗಮವೂ ಆಗಿರುವ ಒಂದು ವಿಶಿಷ್ಟವಾದ ಜನಪದ ಕಲೆ. ಮರಾಠಿಗಳಲ್ಲಿ ಹೆಚ್ಚು ಪ್ರಚಲಿತದಲ್ಲಿದೆ. ಈ ಕಲೆಯಲ್ಲಿ ಗಾಯಕರು, ಪಾತ್ರಧಾರಿಗಳು, ವಾದ್ಯಗಾರರು ಭಾಗವಹಿಸುತ್ತಾರೆ. ಪಾತ್ರಧಾರಿಗಳು ಬಯಲಾಟದ



ವೇಷವನ್ನು ತೊಟ್ಟಿರುತ್ತಾರೆ. ಗಾಯಕರು ದಿನನಿತ್ಯದ ಉಡುಪು ಧರಿಸಿರುತ್ತಾರೆ. ವಾದ್ಯಗಾರರು ಎತ್ತರವಾದ ವೇದಿಕೆಯ ಮೇಲೆ ಕುಳಿತು ತಬಲ, ಹಾರ್ಮೋನಿಯಂ, ತಾಳಗಳ ಹಿನ್ನೆಲೆಯಲ್ಲಿ ಪೌರಾಣಿಕ ಕಥೆಗಳನ್ನು ಹಾಡುತ್ತಾರೆ. ಮೊದಲು ವಿಠಲನನ್ನು ಕುರಿತ ಭಜನೆ ಮಾಡಿದ ನಂತರ, ಪ್ರಧಾನ ಹಾಡುಗಾರ ಸತ್ಯವಾನ ಸಾವಿತ್ರಿ, ಸಂತ ತುಕಾರಾಂ, ಶ್ರೀ ಕೃಷ್ಣ ರಾಧಾ ಸಲ್ಲಾಪ, ಸಂತ ಜಿನಾಬಾಯಿ, ಸಂತ ಜ್ಞಾನೇಶ್ವರ ಮೊದಲಾದ ಭಕ್ತಿರಸ ಹಾಗೂ ಪೌರಾಣಿಕ ಕಥೆಗಳಲ್ಲಿ

ಯಾವುದಾದರೊಂದು ಕಥೆಯನ್ನು ಆರಿಸಿಕೊಂಡು ಕಥೆಯನ್ನು ಪ್ರಾರಂಭಿಸುವರು. ಪ್ರಧಾನ ಗಾಯಕನು ಹಾಡಿನ ಮೊದಲ ಚರಣಗಳನ್ನು ಹಾಡಿದ ಮೇಲೆ ಉಳಿದವರು ಪಲ್ಲವಿಯನ್ನು ಪುನಾರಾವರ್ತನೆ ಮಾಡುತ್ತಾರೆ. ಗಾಯಕರಲ್ಲಿ ಕೆಲವರು ಭಜನೆಯ ರೀತಿಯಲ್ಲಿ ಹಾಡಿದರೆ ಕೆಲವರು ಆ ಪ್ರಸಂಗದಲ್ಲಿ ಬರುವ ಪಾತ್ರಗಳನ್ನು ಅಭಿನಯಿಸಿ ಕುಣಿದು ತೋರಿಸುತ್ತಾರೆ.

ಆತ್ಮಶುದ್ಧಿಗಾಗಿ ತನ್ಮಯತೆಯಿಂದ ಭಗವಂತನನ್ನು ಕುರಿತು ಹಾಡಿ ಕುಣಿಯುತ್ತಾ ಭಕ್ತಿ ಸಮರ್ಪಣೆ ಮಾಡುವ ಸಲುವಾಗಿ ಭಜನೆ, ಭಜನಾ ಬಾರೋಡ್‌ನಂತಹ ಕಲೆಗಳು ಹುಟ್ಟಿಕೊಂಡಿವೆ. ಭಜನಾ ಬಾರೋಡ್ ನಲ್ಲಿ ಗೀತ–ಸಂಗೀತ–ಅಭಿನಯ–ವೇಷಭೂಷಣಗಳು–ವಾದ್ಯಮೇಳ ಎಲ್ಲವೂ ಇವೆ. ಸಾಭಿನಯಪೂರ್ವಕವಾದ ಭಜನಾ ಬಾರೋಡ್ ಒಂದು ರೀತಿಯಲ್ಲಿ ಭಜನಾ ಬಯಲಾಟ ಇದ್ದಂತೆ.

## ಭೂತೇರ ಕುಣಿತ

ಉತ್ತರ ಕರ್ನಾಟಕದ ಗುಲಬರ್ಗಾ, ಬೀದರ್ ಜಿಲ್ಲೆಗಳಲ್ಲಿ ಕಂಡುಬರುವ ಭೂತೇರರು ಗೊಂದಲಿಗರಂತೆಯೇ ಅಂಬಾಭವಾನಿ ಮತ್ತು ಎಲ್ಲಮ್ಮನ ಭಕ್ತರು, ಶಕ್ತಿ ಉಪಾಸಕರು. ಭೂತೇರ ಕುಣಿತದಲ್ಲಿ ಸಾಮಾನ್ಯವಾಗಿ ಎಂಟರಿಂದ ಹತ್ತು ಮಂದಿ ಇರುತ್ತಾರೆ. ಎಣ್ಣೆಯಿಂದ ಕಮಟುಗಟ್ಟಿದ ಕರಿಯ ನಿಲುವಂಗಿ, ಕಣ್ಣಿಗೆ ಕಾಡಿಗೆ, ಹಣೆಗೆ ಅರಿಶಿಣ ಭಂಡಾರ, ಕೊರಳಲ್ಲಿ ಕವಡೆಸರ, ಕವಡೆಯ ಕೈಕಡಗ, ಕಾಲಿಗೆ ಗೆಜ್ಜೆ ಇವು ಭೂತೇರರ ವೇಷ ಭೂಷಣಗಳು. ಕುಣಿತಕ್ಕೆ ಮೊದಲು ಚೌಡಿಕೆಯನ್ನು ಪೂಜಿಸಿ ಅನಂತರ ಕುಣಿಯುತ್ತಾರೆ. ಕುಣಿಯುವಾಗ ವೇದಿಕೆಯೇ ಇರಬೇಕೆಂಬುದೇನಿಲ್ಲ. ಗೊಂದಲ ಹಾಕುವಾಗ, ಜಾತ್ರೆ–ಉತ್ಸವಗಳಲ್ಲಿ, ಹಬ್ಬ–ಹರಿದಿನಗಳಲ್ಲಿ, ಭಿಕ್ಷಾಟನೆಯ ಸಂದರ್ಭದಲ್ಲಿ

ಎಲ್ಲಿ ಬೇಕೆಂದರಲ್ಲಿ ಕುಣಿತ ನಡೆಸುತ್ತಾರೆ. ಹೆಣ್ಣು ಭೂತೇರು ತಲೆಯ ಮೇಲೆ ಯಲ್ಲಮ್ಮ ದೇವಿ ಅಥವಾ ಅಂಬಾಭವಾನಿಯ ಅಲಂಕರಿಸಿದ ಮುಖವಾಡವುಳ್ಳ ಕೊಡ ಹೊತ್ತುಕೊಂಡು ವಿವಿಧ ಭಾವ ಭಂಗಿಗಳಲ್ಲಿ ಕುಣಿಯುತ್ತಾರೆ. ಭೂತೇರ ಕುಣಿತದಲ್ಲಿ ನಯ-ನಾಜೂಕು-ಒನಪು-ವಯ್ಯಾರಗಳ ಬದಲಾಗಿ ರೂಕ್ಷತೆ ಇರುತ್ತದೆ. ಯಾವುದೇ ನಿರ್ದಿಷ್ಟತೆ ಇರುವುದಿಲ್ಲ.

ಚೌಡಿಕೆ ಮತ್ತು ಹಲಗೆಗಳು ಹಿಮ್ಮೇಳದ ವಾದ್ಯಗಳು. ಕುಣಿತದ ಆರಂಭಕ್ಕೆ ತಮ್ಮ ಆರಾಧ್ಯ ದೈವಗಳ ಸ್ತುತಿಗೀತೆಗಳನ್ನು ಹಾಡುತ್ತಾರೆ. ಪ್ರತೀ ಸಾಲಿಗೂ ಉಧೋ ಉಧೋ ಎಂದು ಕೂಗುತ್ತಾ ಕುಣಿಯುತ್ತಾರೆ. ಭೂತೇರು, ಗೊಂದಲಿಗರು, ಜೋಗತಿಯರಲ್ಲಿ ಹೆಚ್ಚಿನ ಸಾಮ್ಯತೆ ಇದೆ.

## ರಿವಾಯತ್ ಕುಣಿತ

ಉತ್ತರ ಕರ್ನಾಕದ ಕೆಲವು ಜಿಲ್ಲೆಗಳಲ್ಲಿ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಕಂಡುಬರುವ ರಿವಾಯತ್ ಕುಣಿತವು ಸಾಮಾನ್ಯವಾಗಿ ಮುಸಲ್ಮಾನರ ಹಬ್ಬ ಹರಿದಿನಗಳು, ಉರುಸ್ ಜಾತ್ರೆಗಳಲ್ಲಿ ನಡೆಯುತ್ತದೆ. ಕಲಾವಿದರು ಸುಮಾರು ಆರರಿಂದ ಇಪ್ಪತ್ತರವರೆಗೂ ಸಮ ಸಂಖ್ಯೆಯಲ್ಲಿರುತ್ತಾರೆ. ಡಪ್ಪು ಹಿಡಿದುಕೊಂಡು ನಿಂತ ನಾಯಕನು ರಿವಾಯತ್ ಪದಗಳನ್ನು ಹಾಡುತ್ತಿದ್ದರೆ ಅವನ ಮುಂಬದಿಯಲ್ಲಿ ಕೈಯಲ್ಲಿ ಕರವಸ್ತ್ರ ಹಿಡಿದು ವೃತ್ತಾಕಾರದಲ್ಲಿ ನಿಂತ ಒಂದು ತಂಡವು ಮುಮ್ಮೇಳದ ಹಾಡುಗಾರನ ಸಾಲುಗಳನ್ನು ಪುನರುಚ್ಚರಿಸುತ್ತಾ ಕುಣಿಯಲಾರಂಭಿಸುತ್ತದೆ. ಕಲಾವಿದರು ದಿನನಿತ್ಯದ ಉಡುಪಿನಲ್ಲಿರುತ್ತಾರೆ. ಪದಗಳಲ್ಲಿನ ಭಾವದ ಏರಿಳಿತಕ್ಕೆ ತಕ್ಕಂತೆ ಕುಣಿತವೂ ಕೂಡ ವಿಭಿನ್ನವಾದ ಭಾವನೆಗಳನ್ನು ಅಭಿವ್ಯಕ್ತಿಸುತ್ತದೆ. ರಿವಾಯತ್ ಪದಗಳು ಮುಸ್ಲಿಂ ಸಂತರು ಮತ್ತು ಶಿವಶರಣರ ಬದುಕಿಗೆ

ಸಂಬಂಧಪಟ್ಟವುಗಳಲ್ಲದೆ ರಾಮಾಯಣ-ಮಹಾಭಾರತ ಪ್ರಸಂಗಗಳನ್ನು ಕುರಿತಾದವುಗಳು ಆಗಿರುತ್ತವೆ. ಉರ್ದು ಮತ್ತು ಕನ್ನಡ ಭಾಷೆಗಳೆರಡರಲ್ಲೂ ಇರುತ್ತವೆ. ಕಲಾವಿದರು ಎದುರು ಬದುರು ಸಾಲಿನಲ್ಲಿ ನಿಂತು ಮುಮ್ಮೇಳದ ದನಿಗೆ ಹಿಮ್ಮೇಳದ ದನಿಗೂಡಿಸುತ್ತಾರೆ. ಮಂಡಲಾಕಾರವಾಗಿ ಸುತ್ತುತ್ತಾ ಹಾಡುವುದೂ ಉಂಟು. ರಿವಾಯತ್



ಹಾಡುಗಾರಿಕೆ ಮತ್ತು ಕುಣಿತಕ್ಕೆ ಹಾರ್ಮೋನಿಯಂ, ಪಿಟೀಲು, ಜಾಂಜ್, ಡೋಲಕ್, ಡಪ್ಪಿನ ಹಲಗೆಗಳು ಹಿಮ್ಮೇಳದ ಸಾಥಿಯಾಗಿರುತ್ತವೆ. ರಿವಾಯತು ಪದಗಳನ್ನು ಹಾಡುವ ತಂಡಗಳ ನಡುವೆ ಸವಾಲ್-ಜವಾಬ್ ಕೂಡಾ ನಡೆಯುತ್ತದೆ. ದೇಹಕ್ಕಿಂತಲೂ ಬುದ್ಧಿಗೆ ಹೆಚ್ಚು ಕಸರತ್ತು ನೀಡುವ ರಿವಾಯತ್ ಪದಗಳು ಸಾಹಿತ್ಯಕ ಗುಣವನ್ನು ಹೊಂದಿವೆ.

# ಹೆಜ್ಜೆ ಮೇಳ

ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ಹೆಜ್ಜೆ ಮೇಳವು ರೂಢಿಯಲ್ಲಿದೆಯಾದರೂ ಬೀದರ್, ರಾಯಚೂರು ಜಿಲ್ಲೆಗಳಲ್ಲಿ ಮೊಹರಂ ಹಬ್ಬದ ಸಂದರ್ಭದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ಹೆಜ್ಜೆ ಮೇಳವು ಬಯಲು ಸೀಮೆಯ ಸುಗ್ಗಿ ಕುಣಿತವನ್ನು ಹೋಲುವಂಥದ್ದು.

ಹೆಜ್ಜೆ ಮೇಳದಲ್ಲಿ ಸಮಸಂಖ್ಯೆಯ ಕಲಾವಿದರು ಪಾಲ್ಗೊಳ್ಳುತ್ತಾರೆ. ಬಿಳಿಯ ಅಂಗಿ, ಬಿಳಿಯ ಕಾಸೆ ಪಂಚೆ, ಸೊಂಟಕ್ಕೆ ಸುತ್ತಿದ ಬಣ್ಣದ ವಸ್ತ್ರ, ತಲೆಗೆ ಕೆಂಪು ರುಮಾಲು, ಬಲಗಾಲಿಗೆ ಗೆಜ್ಜೆ, ಬಲಗೈಯಲ್ಲಿ ಮೊಳದುದ್ದ ಕೋಲು, ಎಡಗೈಯಲ್ಲಿ ಹಳದಿ ಕರವಸ್ತ್ರ ಇವಿಷ್ಟೂ ಹೆಜ್ಜೆ ಮೇಳದ ಕಲಾವಿದರ ವೇಷಭೂಷಣಗಳು. ಹೆಜ್ಜೆ ಮೇಳದ ಕುಣಿತದಲ್ಲಿ ಹಲವು ಪ್ರಕಾರಗಳಿವೆ. ಒಂದ್ಹೆಜ್ಜೆ, ಎರಡ್ಹೆಜ್ಜೆ, ಸಾದಾ ಹೆಜ್ಜೆ, ಮತ್ತು ಕೋಲ್ಹೆಜ್ಜೆ ಹೀಗೆ ವಿವಿಧ ಎಣಿಕೆಯ ಹೆಜ್ಜೆಗಳಿವೆ. ಹೆಜ್ಜೆ ಕುಣಿತದಲ್ಲಿ ಎಂಟು ಮಂದಿ ಕಲಾವಿದರು ಇರುತ್ತಾರೆ. ಇಬ್ಬಿಬ್ಬರು ಜತೆಯಾಗಿ ಹಲಗೆ-ತಾಳ, ದಿಮ್ಮು, ಕಣಿ, ಸನಾದಿವಾದ್ಯಗಳ ಗತ್ತಿಗೆ ಅನುಗುಣವಾಗಿ ಹೆಜ್ಜೆ ಹಾಕುವರು. ಹಿಂದಕ್ಕೆ ಮುಂದಕ್ಕೆ ಚಲಿಸುತ್ತಾ ಒಬ್ಬರ ಸೊಂಟ ಒಬ್ಬರು ಬಳಸುತ್ತಾ, ಎಡಗೈಯಲ್ಲಿ ಹಿಡಿದಿರುವ ಕರವಸ್ತ್ರವನ್ನು ಮೇಲಕ್ಕೆ ಕೆಳಕ್ಕೆ ಬೀಸುತ್ತಾ, ಬಲಗೈಯಲ್ಲಿ ಹಿಡಿದಿರುವ ಕೋಲನ್ನು ಹೆಬ್ಬೆರಳಿನ ಸಂದಿಯಿಂದ ಚಕ್ರಾಕಾರವಾಗಿ ತಿರುಗಿಸುತ್ತಾ ವಯ್ಯಾರವಾಗಿ ಆಡಿಸುವರು.

ಹೆಜ್ಜೆಮೇಳದ ವೈವಿಧ್ಯಪೂರ್ಣವಾದ ಪ್ರಕಾರ ಹದಿನಾರು ಬೈಸಾಕೆ. ಸಾದಾ ಹೆಜ್ಜೆ ಕುಣಿತದಲ್ಲಿ ಸಾಮಾನ್ಯವಾಗಿ ಎರಡೆರಡು ಜನರ ಗುಂಪಾದರೆ, ಹದಿನಾರು ಬೈಸಾಕೆಯಲ್ಲಿ ನಾಲ್ಕು ನಾಲ್ಕು ಜನ ಒಂದು ಗುಂಪಾಗುತ್ತಾರೆ. ಪ್ರಾರಂಭದಲ್ಲಿ, ನಿಂತಲ್ಲಿಯೇ ಒಂದಾದ

ಮೇಲೊಂದರಂತೆ ಹೆಜ್ಜೆಯನ್ನು ಎತ್ತಿ ಇಡುತ್ತ ಅದಕ್ಕೆ ತಕ್ಕಂತೆ ಎಡ ಮತ್ತು ಬಲಭಾಗಗಳಿಗೆ ಮುಖ ತಿರುಗಿಸಿ ಕೈಗಳನ್ನು ಬೀಸುತ್ತಾರೆ. ಅನಂತರ ನಾಲ್ವರ ಪ್ರತೀ ಗುಂಪಿನಲ್ಲೂ ಇಬ್ಬರು ಕುಳಿತು ಅವರ ಮೇಲೆ ಉಳಿದಿಬ್ಬರು ಜಿಗಿಯುತ್ತಾರೆ. ಜಿಗಿದವರು ದಿಕ್ಕು ಬದಲಿಸಿ ಕುಳಿತುಕೊಳ್ಳುತ್ತಿದ್ದಂತೆ ಮೊದಲು ಕುಳಿತಿದ್ದವರು ಅವರ ಮೇಲೆ ಜಿಗಿಯುತ್ತಾರೆ. ಹೀಗೆ ನಾಲ್ಕಾರು ಬಾರಿ ಮಾಡಿದ ಮೇಲೆ ಮತ್ತೆ ಸಾದಾ



ಹೆಜ್ಜೆ ಕುಣಿತದ ಸ್ಥಿತಿಗೇ ಬರುತ್ತಾರೆ. ಹದಿನಾರು ಬೈಸಾಕೆಯಲ್ಲಿ ಮುಖ್ಯವಾಗಿ ಗೋಚರಿಸುವಂಥದ್ದು ಚುರುಕಿನ ಜಿಗಿತ. ಹೀಗೆ ಜಿಗಿದಾಗ, ಕುಸಿದಾಗಲೂ ಸಹ ತಾಳ ತಪ್ಪದಂತೆ ಎಚ್ಚರ ವಹಿಸುವಂಥದ್ದು.

ಹೆಜ್ಜೆಮೇಳದಲ್ಲಿ ಮುಮ್ಮೇಳದ ಹಾಡುಗಾರನು ಕೈಯಲ್ಲಿ ತಾಳ ಹಾಕುತ್ತಾ ಹಾಡುಗಳನ್ನು ಹೇಳುತ್ತಿದ್ದರೆ, ಉಳಿದ ಕಲಾವಿದರು ಹಾಡಿನ

ಗತಿಗೆ ತಕ್ಕಂತೆ ಹೆಜ್ಜೆ ಹಾಕುತ್ತಾ ಕುಣಿಯುತ್ತಾರೆ. ಸುತ್ತುಕೋಲು ಹೆಜ್ಜೆಯು ಈ ಮೇಳದ ಮತ್ತೊಂದು ಪ್ರಕಾರವಾಗಿದ್ದು ತಂಡದ ಮುಖ್ಯಸ್ಥನು ಸಂಜ್ಞೆ ಮಾಡುತ್ತಿದ್ದಂತೆ ಬಲಗೈಯಲ್ಲಿ ಹಿಡಿದ ಕೋಲನ್ನು ತಾಳದ ಗತ್ತಿಗೆ ತಕ್ಕಂತೆ ತಿರುಗಿಸುತ್ತಾ, ಮಧ್ಯೆ ಮಧ್ಯೆ ಪರಸ್ಪರರ ಕೋಲಿಗೆ ಮೂರ್‍ನಾಲ್ಕು ಸಲ ತಾಡಿಸುತ್ತಾ ಹೆಜ್ಜೆಗೆ ಇಳಿಯುವುದು ಸುತ್ತು ಕೋಲಿನ ವಿನ್ಯಾಸ. ಎರಡು ಸಾಲುಗಳಲ್ಲಿ ನಿಂತ ಕಲಾವಿದರು ಜೋಲಿ ಕೊಟ್ಟು ಒಂದು ಏಟನ್ನು ಪರಸ್ಪರರ ಕೋಲಿಗೆ ಹೊಡೆದು ಒಬ್ಬರ ಸಂದಿಯಿಂದ ಇನ್ನೊಬ್ಬರು ತಪ್ಪಿಸಿಕೊಳ್ಳುವರು. ಆಗ ಆ ಕಡೆಯ ಸಾಲು ಈ ಕಡೆಗೂ, ಈ ಕಡೆಯ ಸಾಲು ಆ ಕಡೆಗೂ ಸರಿಯುತ್ತದೆ. ಒಮ್ಮೆ ಉದ್ದ ಸಾಲಾದರೆ ಮತ್ತೊಮ್ಮೆ ಅಡ್ಡ ಸಾಲಿನಲ್ಲಿ ಕುಣಿಯುತ್ತಾರೆ.

ಹೆಜ್ಜೆಮೇಳದಲ್ಲಿ ಬಯಲು ಸೀಮೆಯ ಜಡೆ ಕೋಲಾಟದಂತೆ ಹಗ್ಗವನ್ನು ಹಿಡಿದುಕೊಂಡು ಹೆಜ್ಜೆ ಹಾಕುತ್ತಾ ಜಡೆ ಹೆಣೆಯುವುದೂ ಉಂಟು. ಹೆಜ್ಜೆಮೇಳವನ್ನು ಮೊಹರಂ ಹಬ್ಬದಲ್ಲಿ ಪ್ರದರ್ಶಿಸುತ್ತಾರಾದರೂ ಭಾಗವಹಿಸುವ ಕಲಾವಿದರುಗಳಲ್ಲಿ ಹಿಂದೂಗಳೇ ಹೆಚ್ಚು. ಹಿಂದೂ ಮುಸ್ಲಿಂ ಸಮನ್ವಯದ ಸಂಕೇತ ಹೆಜ್ಜೆಮೇಳ.

## ಹೋಳಿ ಕುಣಿತ

ಕರ್ನಾಟಕದಾದ್ಯಂತ ವಿಜೃಂಭಣೆಯಿಂದ ಆಚರಿಸುವ ಕಾಮನಹಬ್ಬದಲ್ಲಿ ಹೋಳಿ ಕುಣಿತ ನಡೆಯುತ್ತದೆ. ಆಬಾಲವೃದ್ಧರಾದಿಯಾಗಿ ಹೆಂಗಸರು ಗಂಡಸರೆನ್ನದೆ ಸಂಭ್ರಮದಿಂದ ಪಾಲ್ಗೊಳ್ಳುತ್ತಾರೆ. ಹೋಳಿ ಹಬ್ಬವು ಬಣ್ಣಗಳ ರಂಗಿನ ಹಬ್ಬ. ದಕ್ಷಿಣ ಕರ್ನಾಟಕಕ್ಕಿಂತಲೂ ಉತ್ತರ ಕರ್ನಾಟಕದಲ್ಲಿ ಇದರ ಗೌಜು ಗದ್ದಲ ಹೆಚ್ಚು.

ಹೋಳಿ ಹುಣ್ಣಿಮೆಯ ದಿವಸದಂದು ಕಾಮನಕಟ್ಟೆ ಎಂದು ಕರೆಯುವ ಸುಂದರ ಮಂಟಪವನ್ನು ನಿರ್ಮಾಣ ಮಾಡಿ ಅಷ್ಟೇ

ಸುಂದರವಾದ ಕಾಮ ಮತ್ತು ರತಿಯರ ವಿಗ್ರಹಗಳನ್ನು ಕೂರಿಸಿ ಪೂಜಿಸುತ್ತಾರೆ. ಸಂಜೆ ನಾಲ್ಕೆತ್ತಿನ ಬಂಡಿಯಲ್ಲಿ ಊರ ತುಂಬಾ ಮೆರವಣಿಗೆ ಮಾಡುತ್ತಾರೆ. ಮೆರವಣಿಗೆಯ ಮುಂಭಾಗದಲ್ಲಿ ನೂರಾರು



ಮಂದಿ ಸಣ್ಣ–ದೊಡ್ಡ ಹಲಗೆಗಳನ್ನು ಹಿಡಿದು ಬಾರಿಸುತ್ತಾ ಕೇಕೆ ಹಾಕುತ್ತಾ ಸಾಮೂಹಿಕವಾಗಿ ನರ್ತಿಸುತ್ತಾರೆ. ರಾತ್ರಿ ರಾಶಿ ರಾಶಿ ಕುಳ್ಳು ತಂದು ಕಾಮನಕಟ್ಟೆಯಲ್ಲಿ ಒಟ್ಟಿ ಕಾಮನನ್ನು ಸುಟ್ಟು ಕೆಂಡ ಕೆದರಿ ಬೂದಿಯನ್ನು ಸೂರೆ ಮಾಡಿ ಜಿಗಿದಾಡುತ್ತಾರೆ.

ಮಾರನೆಯ ದಿವಸ ಓಕುಳಿಯಾಟ. ಬಂಡಿ ಬಂಡಿಗಳ ಮೇಲೆ ಬಣ್ಣ ಬಣ್ಣದ ನೀರು ತುಂಬಿದ ಹಂಡೆಗಳನ್ನು ಹೇರಿಕೊಂಡು ಬಂದು ಸಿಕ್ಕವರಿಗೆಲ್ಲಾ ಬಣ್ಣ ತಿಕ್ಕಿ ಓಕುಳಿಯಾಡಿ ಮೋಜು ಮಾಡುತ್ತಾರೆ. ವೈವಿಧ್ಯಮಯ ವೇಷಗಳನ್ನು ಧರಿಸಿ ಸಂಭ್ರಮಪಡುತ್ತಾರೆ. ದಕ್ಷಿಣ ಕರ್ನಾಟಕದಲ್ಲಿಯೂ ಹೋಳಿ ಹಬ್ಬವು ಕುಣಿತ, ಕೇಕೆ, ಉತ್ಸಾಹಗಳಿಂದ ಕೂಡಿದ ಉತ್ಸಾಹದ ಹಬ್ಬವಾಗಿದೆ.



## ಜನಪದ ಕಲೆ

ಕರ್ನಾಟಕದಲ್ಲಿ ಅಧಿಕ ಸಂಖ್ಯೆಯ ಜನಪದ ಕಲಾವಿದರಿದ್ದಾರೆ. ಇವರಲ್ಲಿ ಸ್ತ್ರೀ ಪುರುಷರಿಬ್ಬರೂ ಪ್ರಮುಖ ಪಾತ್ರ ವಹಿಸಿರುವುದು ವಿಶೇಷ. ಗಾಯನ, ನರ್ತನ, ವಾದ್ಯವಾದನ, ವೇಷಭೂಷಣ, ಪ್ರದರ್ಶನ ಮೊದಲಾದವುಗಳಲ್ಲಿ ಒಬ್ಬರಿಗಿಂತ ಒಬ್ಬರು ಮೇಲಾಗಿರುವುದನ್ನು ಕಾಣಬಹುದು. ಈ ಅಭಿಜಾತ ಕಲಾವಿದರು ತಲೆ ತಲಾಂತರದಿಂದ ಉಳಿಸಿಕೊಂಡು ಬಂದಿರುವ ಕಲೆಗಳು ಅಪಾರವಾಗಿವೆ, ವೈವಿಧ್ಯಮಯುವಾಗಿವೆ. ಕರ್ನಾಟಕದಲ್ಲಿ ಪ್ರಚಾರದಲ್ಲಿರುವ, ಪ್ರಸಿದ್ಧವಾಗಿರುವ ಕೆಲವು ಪ್ರದರ್ಶನ ಕಲೆಗಳನ್ನು ಸಚಿತ್ರವಾಗಿ ಈ ಗ್ರಂಥದಲ್ಲಿ ಪರಿಚಯಿಸಿದೆ.

ಜನಪದ ಸಾಹಿತ್ಯ ಸಂಗ್ರಹ, ವಿಶ್ಲೇಷಣೆ, ವ್ಯಾಖ್ಯಾನದಲ್ಲಿ ಸೋಪಜ್ಞೆಯನ್ನು ಉಳಿಸಿಕೊಂಡಿರುವ ಪ್ರಸಿದ್ಧ ಜಾನಪದ ವಿದ್ವಾಂಸರಾದ ಡಾ॥ ಚಕ್ಕೆರೆ ಶಿವಶಂಕರ್ ಜನಪದ ಕಲೆಗಳ ಪ್ರಸ್ತುತ ಪುಸ್ತಕವನ್ನು ಸಿದ್ಧಪಡಿಸಿದ್ದಾರೆ. ಇದರಲ್ಲಿ ಉತ್ತರ ಕರ್ನಾಟಕ ಪ್ರದೇಶದ ಪ್ರಸಿದ್ಧ ಕಲೆಗಳ ಮಾಹಿತಿಯಿದೆ.

ಪ್ರೊ. ಡಿ. ಲಿಂಗಯ್ಯ


**ಕರ್ನಾಟಕ ಜಾನಪದ ಪರಿಷತ್ತು**

**ಜಾನಪದ ಸಿರಿಭುವನ**

ನಂ.1, ಜಲದರ್ಶಿನಿ ಬಡಾವಣೆ, ಎಂ. ಎಸ್. ರಾಮಯ್ಯ ಆಸ್ಪತ್ರೆ ಮಹಾದ್ವಾರದ ಹತ್ತಿರ, ಹೊಸ ಬಿ ಇ ಎಲ್ ರಸ್ತೆ, ಬೆಂಗಳೂರು-5600054 ದೂರವಾಣಿ: 080-23605033

janapadaparishath@hotmail.com